RNI No. **KARBIL/2001/47147**

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೮ **Volume 148**	ಬೆಂಗಳೂರು, ಗುರುವಾರ, ನವೆಂಬರ್ ೭, ೨೦೧೩ (ಕಾರ್ತೀಕ ೧೬, ಶಕ ವರ್ಷ ೧೯೩೫) **Bangalore, Thursday, November 7, 2013 (Karthika 16, Shaka Varsha 1935)**	ಸಂಚಿಕೆ ೪೪ **Issue 44**

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

HOME SECRETARIAT

Sub:- Controlling of all Places of Public Amusement, issuing of Guidelines, reg.-

PREAMBLE:

Clause (14) of Section 2 of the Karnataka Police Act, 1963 defines "Place of Public Amusement" It means any place, where music, singing, dancing, or any diversion, or game, or the means of carrying on the same is provided and to which the public are admitted and includes a race course, circus, theatre, music hall, billiard room, bagatelle room, gymnasium, fencing school, swimming pool or dancing hall;

Subsection (2)(i) of Section 31 of the Karnataka Police Act, 1963 empowers the Police Commissioners and District Magistrates to make, alter or rescind orders under clauses (h), (n), and (r), subject to the control of the Government. But the power to make, alter or rescind orders under the remaining clauses (d), (w) (iii) and (y) is subject to the previous sanction of the Government, as provided for in sub-section 2(ii).

A number of instances have come to the notice of the police wherein, in the name of providing 'amusement', the Clubs, etc.are indulging in activities like gaming, gambling, betting, playing game of chance , etc. This has been brought to the notice of the Government on many occasions by the police which has resulted in the necessity to regulate such clubs, etc., by issuing guidelines.

In the above circumstances, the Government of Karnataka consider it necessary to issue guidelines for Controlling of all Places of Public Amusement in the State of Karnataka to be followed by the licensing authorities, specially while issuing licenses to all forms gaming, gambling or betting, or playing game of chance etc., in clubs, etc., and places of public amusement in the interest of preservation of law and order.

GOVERNMENT ORDER NO.HD 258 SST 213 BANGALORE, DATED THE 12-09-2013

In the above circumstances, the Government of Karnataka after considering all the above aspects including the judgement issued by the Courts, hereby issue the following guidelines which shall be implemented by all the Licensing Authorities namely District Magistrates and Police Commissioners in their respective jurisdiction in addition to all the rules/orders/notifications, etc., in force, in this behalf while issuing licenses for the Places of Public Amusement, including the ones registered under the Societies Registration Act, 1960 or the Karnataka Co-operative Societies Act, 1959. Further, the rules, if any, made for the 'Licencing and Controlling of Places of Public Amusement', by the District Magistrates and Commissioners of Police shall include clubs also, registered either under the Societies Registration Act, 1960 or the Karnataka Co-operative Societies Act, 1959.

GUIDELINES:-

A. The licensing authority shall consider the following before issue of licenses to place of public amusement,-

(1) the interest of public in general;

(2) the status and antecedents of the applicant who wishes to obtain a licence to run a place of public amusement;

(3) availability of parking place commensurate with the seating capacity;

(4) the possible adverse impact on Law and Order, public peace and tranquillity in the locality and in general;

(5) the distance and the vicinity of the proposed Place of Public Amusement, to the nearby educational or religious institutions;

Explanation:- For this purpose,

(i) vicinity shall mean, not within a distance of 200 (two hundred) metres from the proposed Place of Public Amusement.

(ii) 'Educational Institution' means an educational institution as defined in the Karnataka Education Act, 1983.

(iii) 'Religious Institution' means and includes a temple, mutt, mosque, church, synagogue, agiary or other place of public religious worship which is as the case may be, established or managed or owned by a Public trust, the Religious and Charitable Endowments, or a Society under the Societies Registration Act or Wakf Board Act or under such any other religious management.

(6) that the Place of Public Amusement does not in any way incite religious feelings;

(7) that the materials used for the construction of structure of Place of Public Amusement do not pose any kind of fire hazard;

(8) that the proposed premises do not cause obstruction, inconvenience, annoyance, risk, danger or damage to the residents or to passersby of such premises;

(9) there shall be openings sufficiently wide enough to ensure good ventilation or there shall be provision for sufficient good air conditioning;

(10) the means of entrance and exit to and from the place of public Amusement shall be convenient, accessible, easy, sufficient and satisfactory, exit including an emergency exit opening outwards;

(11) the Licensing Authority shall have discretion to take action if any, if the Place of Public Amusement appears to him to be likely to cause obstruction, inconvenience, annoyance, risk, danger or damage to residents or traffic in the vicinity where it is proposed to be located or is located;

(12) that all adequate precautions have been taken in the premises in respect of which the licence is to be granted to provide for the safety, convenience and comfort of the persons taking part in the permitted activities inside the premises;

(13) that the premises should be sound proofed so as not to disturb the peace and tranquillity of the neighbourhood. Even within the premises of the Place of Public Amusement, the sound shall not exceed the permitted levels (decibels) so as to cause sound/noise pollution;

(14) The licensee shall provide separate rest room utility for the use of women customers or employees, handicapped persons and such utilities shall be maintained in a clean and hygienic manner;

(15) No person keeping a Place of Public Amusement shall operate or cause to be operated or let out an amusement machine except with the approval of the Licensing Authority. No such approval shall be required for machines exclusively used for the sale of articles such as sweets or for the recording of weights.

(16) the licensee should not accommodate more than the required persons for each game, gymnasium billiard hall, bagatelle room etc. in the Place of Public Amusement;

(17) that the licensee should not permit any obscene or objectionable posters or pictures to be exhibited in the Place of Public Amusement;

(18) that the licensee shall not exhibit any DVDs or cassette or blue films or pornographic material or the like in accompaniment, to or without the on-going music or dance inside the premises;

(19) The Places of Public Amusement should not allow any game to be played or usage of software having explicit pornographic content or content in any way derogatory to the status of women or children. The licensee shall install necessary filters/ software`s to block sites/games that are in any way derogatory, obscene, inflammatory or that outrage the modesty of any human being, or incite religious feelings;

(20) that the proposed Place of Public Amusement does not promote public gambling or the premises should not be used as a gaming house or allow the use of narcotic and psychotropic substances of permit in any manner other illegal activity, under any law for the time being in force;

(21) no liquor, drugs including Narcotic Drugs and Psychotropic Substances or any other intoxicating substances should be allowed inside the premises of place of public amusement;

(22) there shall in every Place of Public Amusement be provided and maintained, so as to be readily available, a first aid-box or cupboard. Such a box or cupboard should be kept in charge of a responsible person who shall be readily available on the premises.

(23) Snooker/Billiards/ Pool Parlours shall not allow bets/ wagers to be placed on the games nor allow any king of gambling or speculation to occur within the premises;

(24) The licensee shall certify that each of the games installed is restricted to games of skills only.

(25) The licensee shall ensure that none of the video games or software allows the customers to indulge in gambling, betting in any manner, whether through the use of cash, coins, coupon, debit or credit cards, online banking, or promissory notes or by any other means including electronic transfer;

(26) If any of the playing machines or stations has a connection to the internet, all rules and regulations applicable to Cyber Cafes in Karnataka shall be adhered to without fail;

(27) the licensee or management should install "Tracking software" to keep a log of all online sites visited by the customers shall be installed in such machines;

(28) the licensee or management of the Place of Public Amusement shall install high quality CCTV cameras inside the premises as well as at the entrance to keep proper surveillance on all the activities of the parlour;

(29) the hard disk storing the footages should have suitable memory capacity to store at least recording of 3 (three) months duration. The management of the establishment shall provide CCTV footages and other material documents to the police as and when called for,

(30) the licensee or the management should prohibit the entry of unaccompanied minors below the age of sixteen into the premises, even if they are the children/relatives or friends of the members or such societies or clubs;

(31) the licensee shall keep either manual or computerised entries of the cash available with the cashier and each individual employee at the time of opening of the premises each day and also keep a tally of the amounts received from customers and other sources as well as expenses incurred during the day and the account should be closed at end of transaction of each business day;

(32) that a license granted for keeping a Place of Public Amusement shall not be transferrable. The licensee cannot assign his business to any other person or enter into an agreement with another person involving his giving upthe conduct or control over the business without prior approval of the licensing authority;

(33) in the case of death of the licensee, his heir or legal representative may make an application within one month from the date of death to the Licensing Authority, to have the benefit of the license for the unexpired portion of the term of the license and the Licensing Authority may decide the application having regard to the guidelines and provisions of law existing;

(34) the Licensing Authority or any officer as may be authorized on his/her behalf, may. if necessary, hold an inspection of the site or premises. The Licencing Authority or the officers so authorized, may, if need be, seek assistance of any other authority or authorities during such inspections;

(35) the licensee or management shall allow the police or other legal agencies for periodic/ surprise inspection Place of Public Amusement;

(36) The licensee of the premises shall co-operate with police and / or other law enforcing agencies while enforcing rules and regulations;

(37) The licensee shall intimate the police in case of any anti-social or illegal activities coming to their notice;

B . In cases of existing Places of Public Amusement, the Licensing Authorities shall give a reasonable time of sixty days from the date of commencement of these guidelines stipulated for compliance of conditions mentioned above.

Provided further that additional conditions may be imposed, if necessary, by the Licensing Authority considering the local Conditions, for issue of Licence, for reasons, to be recorded in writing, and communicate the same to the licensee.

This Government Order shall come into force with immediate effect.

By Order and in the name of the Governor of Karnataka,

SUSHAMA GODBOLE,
Additional Secretary to Government,
Home Department (Law and Order).

P.R. 925
SC - 500

ತೋಟಗಾರಿಕೆ ಸಚಿವಾಲಯ

ವಿಷಯ: ರೇಷ್ಮೆ ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ವಿತ್ತೀಯ ಪ್ರತ್ಯಾಧಿಕಾರ ನೀಡುವ ಕುರಿತು.

ಓದಲಾಗಿದೆ:

1. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ನಡವಳಿ ಸಂಖ್ಯೆ: ಪಿಎಸ್2: ಸಿಡಿಪಿ:ಕ್ರಿಯಾಯೋ:1:2005-06, ದಿನಾಂಕ: 28-06-2005.
2. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ನಡವಳಿ ಸಂಖ್ಯೆ: ಪಿಎಸ್5: ಸಿಡಿಪಿ:ಅಪ್ರ:163/2006-07, ದಿನಾಂಕ: 31-01-2007.
3. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ನಡವಳಿ ಸಂಖ್ಯೆ: ಯೋ.ಪಿಎಸ್5/ಅಆಪ್ರ/163/2007-08, ದಿನಾಂಕ: 27-12-2007.
4. ಸರ್ಕಾರದ ಪತ್ರ ಸಂಖ್ಯೆ:ತೋಇ 103 ರೇಕೃವಿ 2013, ದಿನಾಂಕ: 14-06-2013 ಮತ್ತು 08-07-2013
5. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ: ಯೋ.ಪಿಎಸ್.3/ ಆಪ್ರತ್ಯಾ/26/2013-14, ದಿನಾಂಕ: 08-07-2013 ಮತ್ತು 18-07-2013..

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ:28-06-2005ರ ನಡವಳಿಯಲ್ಲಿ 2005-06ನೇ ಸಾಲಿನಲ್ಲಿ ಇಲಾಖೆಯು ಕೇಂದ್ರ ರೇಷ್ಮೆ ಮಂಡಲಿಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸುವ ಕೆಲವು ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸಹಾಯಧನ ಮಂಜೂರು ಮಾಡುವ ಪ್ರಾಧಿಕಾರ, ಮೇಲು ಸಹಿ ಮಾಡುವ ಪ್ರಾಧಿಕಾರ ಮತ್ತು ಹಣ ಸೆಳೆಯುವ ಪ್ರಾಧಿಕಾರಗಳೆಂದು ಗುರುತಿಸಿ, ಅದರಂತೆ ಕ್ರಮ ಕೈಗೊಳ್ಳುವಂತೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಆದೇಶಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ:31-01-2007ರ ನಡವಳಿಯಲ್ಲಿ ಕೇಂದ್ರ ರೇಷ್ಮೆ ಮಂಡಲಿಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸುವ ಕೆಟಲಿಟಿಕ್ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಾಗೂ ಮತ್ತಿತರ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸಹಾಯಧನ ಮಂಜೂರು, ಮೇಲು ಸಹಿ ಮತ್ತು ಹಣ ಸೆಳೆಯುವ ಪ್ರಾಧಿಕಾರಗಳೆಂದು ಗುರುತಿಸಿ, ಅದರಂತೆ ಕ್ರಮ ಕೈಗೊಳ್ಳುವಂತೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಆದೇಶಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ದಿನಾಂಕ:27-12-2007ರ ನಡವಳಿಯಲ್ಲಿ ಇಲಾಖೆಯಲ್ಲಿ ಅನುಷ್ಠಾನದಲ್ಲಿರುವ ಕೆಟಲಿಟಿಕ್ ಅಭಿವೃದ್ಧಿ ಯೋಜನೆ, ರೇಷ್ಮೆ ವರದಾನ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗೆ ಸಂಬಂಧಿಸಿದಂತೆ ಸಹಾಯಧನ ಮಂಜೂರಾತಿ ಮಾಡುವ ಹಾಗೂ ಮೇಲು ಸಹಿ ಮಾಡುವ ಹಣ ಸೆಳೆಯುವ ಪ್ರಾಧಿಕಾರಗಳಾಗಿ ಪ್ರತ್ಯಾಯೋಜಿಸಿ, ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಆದೇಶಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ದಿನಾಂಕ:08-07-2013ರ ಪತ್ರದಲ್ಲಿ ಮೈಸೂರು ಆರ್ಥಿಕ ಅಧಿಕಾರಿಗಳ ಕೈಪಿಡಿಯ ನಿಯಮ 5ರಲ್ಲಿ ಯಾವುದೇ ಪ್ರಾಧಿಕಾರವು ತನಗೆ ನೀಡಿದ ಅಧಿಕಾರವನ್ನು ಇತರೇ ಪ್ರಾಧಿಕಾರಕ್ಕೆ ಅಥವಾ ಕೆಳಗಿನ ಅಧಿಕಾರಿಗಳಿಗೆ ನೀಡಲು ಅವಕಾಶವಿರುವುದಿಲ್ಲ ಮತ್ತು ಸರ್ಕಾರ ಮಾತ್ರ ಅಂತಹ ಅಧಿಕಾರವನ್ನು ಪ್ರತ್ಯಾಯೋಜಿಸಬಹುದಾಗಿರುತ್ತದೆ. ಆದ್ದರಿಂದ ವಿಕೇಂದ್ರೀಕರಣ ಮತ್ತು ಆರ್ಥಿಕ ಪ್ರತ್ಯಾಯೋಜನೆಯನ್ನು ನೀಡಿ ಇಲಾಖೆಯು ಕ್ಷೇತ್ರಾಧಿಕಾರಿಗಳಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಹೊರಡಿಸಿರುವ ಮೇಲೆ ಓದಲಾದ ಕ್ರಮ ಸಂಖ್ಯೆ (1) ರಿಂದ (3)ರ ನಡವಳಿಗಳನ್ನು ಹಿಂದಕ್ಕೆ ಪಡೆಯಲಾಗಿದೆ ಎಂದು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರಿಗೆ ಸರ್ಕಾರವು ನಿರ್ದೇಶನ ನೀಡಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ದಿನಾಂಕ:08-07-2013 ಮತ್ತು 18-07-2013ರ ಪತ್ರದಲ್ಲಿ 2013-14ನೇ ಸಾಲಿನಲ್ಲಿ ವಿವಿಧ ಫಲಾನುಭವಿ ಆಧಾರಿತ ಯೋಜನಾ ಕಾರ್ಯಕ್ರಮಗಳಿಗೆ ಸರ್ಕಾರದಿಂದ ಹಣ ಬಿಡುಗಡೆಯಾಗಿದ್ದು, ಕ್ಷೇತ್ರಮಟ್ಟದ ಅನುಷ್ಠಾನಾಧಿಕಾರಿಗಳಿಗೆ ಬೇಡಿಕೆ/ಎಂಪಿಕ್ ಅನ್ವಯ ಹಣ ಹಂಚಿಕೆ ಮಾಡಲಾಗಿದೆ. ಕ್ರಿಯಾಯೋಜನೆಗಳಂತೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಕ್ರಮ ಕೈಗೊಂಡಿದ್ದು ಮಂಜೂರಾತಿ ಪ್ರಕ್ರಿಯೆ ಕೈಗೊಳ್ಳಬೇಕಾಗಿರುತ್ತದೆ. ಸಬ್ಸಿಡಿ ಮಂಜೂರಾತಿ ಪ್ರಕ್ರಿಯೆ ಸ್ಥಗಿತಗೊಳಿಸಿರುವುದರಿಂದ ರೇಷ್ಮೆ ಉದ್ಯಮದ ಭಾಗೀದಾರರಾದ ಪರಿಶಿಷ್ಟ ಜಾತಿ/ಪಂಗಡ/ಇತರೆ ವರ್ಗದ ಸಣ್ಣ/ಅತಿಸಣ್ಣ/ರೈತರು/ರೇಷ್ಮೆ ಬೆಳೆಗಾರರು/ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಸೌಲಭ್ಯಗಳನ್ನು ನೀಡಲು ಸಾಧ್ಯವಾಗುತ್ತಿಲ್ಲ. ಇದರಿಂದ ಭಾಗೀದಾರರುಗಳು ಸಂಕಷ್ಟಕ್ಕೆ ಸಿಲುಕುತ್ತಾರೆ. ಸರಿಯಾದ ಸಮಯದಲ್ಲಿ ಹಣ ಮಂಜೂರು ಮಾಡದಿದ್ದಲ್ಲಿ ಇವರುಗಳ ಆರ್ಥಿಕ ಸ್ಥಿತಿ ಹದಗೆಟ್ಟು, ಸಾಮಾಜಿಕ ಪರಿಸ್ಥಿತಿಯಲ್ಲಿ ಗಣನೀಯ ಹಿನ್ನಡೆಯಾಗುತ್ತದೆ.

ಇಲಾಖೆಯಲ್ಲಿ ಇರುವ ಯೋಜನಾ ಕಾರ್ಯಕ್ರಮಗಳಲ್ಲಿ ಬಹುಪಾಲು ಕಾರ್ಯಕ್ರಮಗಳು ಫಲಾನುಭವಿ ಆಧಾರಿತವಾಗಿದ್ದು, ಸಹಾಯಧನ/ ಪ್ರೋತ್ಸಾಹಧನ ನೀಡುವಂತದ್ದಾಗಿರುತ್ತದೆ. ಮಂಜೂರಾತಿಯನ್ನು ನೀಡುವುದನ್ನು ಸ್ಥಗಿತಗೊಳಿಸಿರುವ ಕಾರಣ ಯಾವುದೇ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗಿರುವುದಿಲ್ಲ. ಭಾಗೀದಾರರ ಹಿತ ಕಾಪಾಡಲು ಹಾಗೂ ಇಲಾಖೆಯ ಪ್ರಗತಿ ಅಭಿವೃದ್ಧಿಯ ಸದುದ್ದೇಶದಿಂದ ಈ ಹಿಂದೆ ಇಲಾಖೆಯಿಂದ ನೀಡಲಾಗಿರುವ ಹಾಗೂ ಚಾಲ್ತಿಯಲ್ಲಿರುವ ಆರ್ಥಿಕ ಪ್ರತ್ಯಾಯೋಜನೆಯನ್ನು ಜಾರಿಯಲ್ಲಿರಿಸುವುದು ಅವಶ್ಯಕವಾಗಿದೆ. 2013-14ನೇ ಸಾಲಿನ ಯೋಜನೆಗಳಲ್ಲಿ ಘಟಕದರಗಳಲ್ಲಿ ಹೆಚ್ಚಳವಾಗಿರುವ ಪ್ರಯುಕ್ತ ಸಹಾಯಧನ ನೀಡಿಕೆಯಲ್ಲಿಯೂ ಸಹ ಹೆಚ್ಚಳವಾಗಬೇಕಿರುತ್ತದೆ. ಇದರನ್ವಯ ಪ್ರತ್ಯಾಯೋಜನೆಯಲ್ಲಿ ಪರಿಷ್ಕರಣೆಯಾಗಬೇಕಾಗಿರುತ್ತದೆ ಎಂದು ರೇಷ್ಮೆ ಆಯುಕ್ತರು ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

ರೇಷ್ಮೆ ಗೂಡುಗಳಿಗೆ ಉತ್ಪಾದಕತೆ ಮತ್ತು ಗುಣಮಟ್ಟದ ಆಧಾರದ ಮೇಲೆ ಪ್ರೋತ್ಸಾಹ ಧನ ನೀಡುವ ಕಾರ್ಯಕ್ರಮವನ್ನು ತಾಂತ್ರಿಕ ಸೇವಾ ಕೇಂದ್ರಗಳ ಮೂಲಕ ಅನುಷ್ಠಾನ ಮಾಡಲಾಗುತ್ತಿದೆ. ಸದರಿ ಯೋಜನೆಯಡಿ 100 ರೋಗರಹಿತ ಮಿಶ್ರ ತಳಿ ಮತ್ತು ದ್ವಿತಳಿ ಮೊಟ್ಟೆಗಳಿಗೆ ಸರಾಸರಿ 60 ಕೆಜಿಗೂ ಹೆಚ್ಚಿನ ಇಳುವರಿ ಪಡೆದಂತಹ ಮಿಶ್ರತಳಿ ಮತ್ತು ದ್ವಿತಳಿ ಗೂಡುಗಳಿಗೆ ಕ್ರಮವಾಗಿ ರೂ.10/- ಹಾಗೂ ರೂ.40/-ರಂತೆ ಪ್ರೋತ್ಸಾಹಧನ

ನೀಡಲಾಗುತ್ತಿದೆ. ಸದರಿ ಕಾರ್ಯಕ್ರಮದ ಅನುಷ್ಠಾನಕ್ಕೆ ಸರ್ಕಾರದ ಆದೇಶ ಸಂಖ್ಯೆ: ತೋಇ 101 ರೇಕೃವಿ 2012, ದಿನಾಂಕ: 17–7–2012ರಲ್ಲಿ ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಗಳ ಮುಖಾಂತರ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವಂತೆ ಆದೇಶಿಸಲಾಗಿದೆ. ಇಲಾಖೆಯ ಪತ್ರ ಸಂಖ್ಯೆ:ಗೂಮಾ/ತಾಂ2/ದ್ವಿಮಿ/ಪ್ರೋಧ/2(ಎ)/2012–13, ದಿನಾಂಕ 03–10–2012ರಲ್ಲಿ ಈ ಕಾರ್ಯಕ್ರಮದ ಅನುಷ್ಠಾನವನ್ನು ತಾಂತ್ರಿಕ ಸೇವಾ ಕೇಂದ್ರ ಮತ್ತು ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿಯ ಮೂಲಕ ಪ್ರೋತ್ಸಾಹಧನ ಪಾವತಿಸಲು ಸೂಕ್ತವೆಂದು ಕೋರಿದ ಅನ್ವಯ ಸರ್ಕಾರದ ಆದೇಶ ಸಂಖ್ಯೆ: ತೋಇ 101 ರೇಕೃವಿ 2012 (ಭಾಗ–2), ದಿನಾಂಕ:08–10–2012ರಲ್ಲಿ ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಗಳ ಮೂಲಕ ಪಾವತಿಸುವ ಬದಲಿಗೆ ತಾಂತ್ರಿಕ ಸೇವಾ ಕೇಂದ್ರ ಮತ್ತು ವಿಭಾಗೀಯ ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿಯ ಮೂಲಕ ಪಾವತಿಸಲು ಸರ್ಕಾರವು ಆದೇಶ ಹೊರಡಿಸಿರುತ್ತದೆ. ಸದರಿ ಕಾರ್ಯಕ್ರಮದಡಿ ಸಂಬಂಧಿಸಿದ ತಾಂತ್ರಿಕ ಸೇವಾ ಕೇಂದ್ರದ, ಅಧಿಕಾರಿಗಳಿಗೆ ಮಂಜೂರಾತಿ ನೀಡಲು ಪ್ರತ್ಯಾಯೋಜಿಸಿದೆ. ಈ ಕಾರ್ಯಕ್ರಮದಡಿ ಪ್ರತಿ ನಿತ್ಯ ರೇಷ್ಮೆ ಗೂಡು ಮಾರುಕಟ್ಟೆಯಲ್ಲಿ ಮಾರಾಟವಾಗುವ ರೇಷ್ಮೆ ಗೂಡಿಗೆ ಪ್ರೋತ್ಸಾಹಧನ ನೀಡಲು ಮಂಜೂರಾತಿ ನೀಡಬೇಕಾಗಿದ್ದು ವಿಳಂಬವಿಲ್ಲದೆ ಪ್ರೋತ್ಸಾಹಧನ ಪಾವತಿಸಲು ಅವಶ್ಯಕವಾಗಿದೆ ಈ ಮಂಜೂರಾತಿ ಅಧಿಕಾರವನ್ನು ರೇಷ್ಮೆ ವಿಸ್ತರಣಾಧಿಕಾರಿಗಳಿಗೆ ನೀಡಬೇಕಾಗಿದೆ.

ಇಲಾಖೆಯಲ್ಲಿ ಕೆಟಲಿಟಿಕ್ ಅಭಿವೃದ್ಧಿ ಯೋಜನೆ, ರೇಷ್ಮೆ ವರದಾನ ಯೋಜನೆ, ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆ, ರೇಷ್ಮೆ ಸಾಕಾಣಿಕಾ ಅಭಿವೃದ್ಧಿ ಚಟುವಟಿಕೆ ಯೋಜನೆ, ರೇಷ್ಮೆ ನೂಲು ಬಿಚ್ಚಾಣಿಕೆ ಘಟಕಗಳಿಗೆ ಬಡ್ಡಿ ಸಹಾಯಧನ ಯೋಜನೆ, ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಯೋಜನೆ, ದ್ವಿತಳಿ ಬಿತ್ತನೆ ಗೂಡಿಗೆ ಉತ್ತೇಜಕಗಳು, ಚಾಕಿ ಸೇವಾ ಶುಲ್ಕ, ರೇಷ್ಮೆ ವ್ಯವಸಾಯ ಅಭಿವೃದ್ಧಿ ಕ್ಲಸ್ಟರ್, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗಳಡಿ ಅನುಷ್ಠಾನದಲ್ಲಿರುವ ವಿವಿಧ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಸಹಾಯಧನ/ಪ್ರೋತ್ಸಾಹಧನ ಮಂಜೂರಾತಿ ನೀಡುವುದಕ್ಕೆ ಪರಿಷ್ಕೃತ ವಿತ್ತೀಯ ಪ್ರಾಧಿಕಾರವನ್ನು ಕ್ಷೇತ್ರಮಟ್ಟದ ಅನುಷ್ಠಾನಾಧಿಕಾರಿಗಳಿಗೆ ನೀಡಬೇಕಾಗಿದ್ದು, ವಿವರವು ಈ ಕೆಳಕಂಡಂತಿದೆ.

ಕ್ರ.ಸಂ	ಕಾರ್ಯ ಕ್ರಮದ ವಿವರ	ಪ್ರಸ್ತುತ ಪತ್ಯಾಯೋಜನೆ			
		ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು	ರೇಷ್ಮೆ ಜಂಟಿ ನಿರ್ದೇಶಕರು	ರೇಷ್ಮೆ ಉಪ ನಿರ್ದೇಶಕರು	ರೇಷ್ಮೆ ವಿಸ್ತರಣಾಧಿಕಾರಿಗಳು
1.	ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಸಹಾಯಧನ/ಪ್ರೋತ್ಸಾಹಧನ	Full Powers	ರೂ.50,001 ರಿಂದ ರೂ.1,23,000 ವರೆಗೆ	ರೂ.50,000	–
2.	ಉತ್ಪಾದಕತೆ ಮತ್ತು ಗುಣಮಟ್ಟದ ಆಧಾರದ ಮೇಲೆ ಗೂಡಿಗೆ ಪ್ರೋತ್ಸಾಹಧನ	Full Powers	–	–	Full Powers

ಕ್ರ.ಸಂ	ಕಾರ್ಯ ಕ್ರಮದ ವಿವರ	ಪ್ರಸ್ತಾಪಿತ ಪತ್ಯಾಯೋಜನೆ				
		ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು	ರೇಷ್ಮೆ ಜಂಟಿ ನಿರ್ದೇಶಕರು	ರೇಷ್ಮೆ ಉಪ ನಿರ್ದೇಶಕರು	ರೇಷ್ಮೆ ಸಹಾಯಕ ನಿರ್ದೇಶಕರು	ತಾಂತ್ರಿಕ ಸೇವಾ ಕೇಂದ್ರ ರೇಷ್ಮೆ ವಿಸ್ತರಣಾಧಿಕಾರಿಗಳು
1.	ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಸಹಾಯಧನ/ಪ್ರೋತ್ಸಾಹಧನ	Full Powers	(ಪ್ರತಿ ಪ್ರಕರಣ) ರೂ.75,001 ರಿಂದ ರೂ.1,50,000 ವರೆಗೆ	(ಪ್ರತಿ ಪ್ರಕರಣ) ರೂ.25,001 ರಿಂದ ರೂ.75,000 ರವರೆಗೆ	(ಪ್ರತಿ ಪ್ರಕರಣ) ರೂ.25,000 ರವರೆಗೆ	–
2.	ಉತ್ಪಾದಕತೆ ಮತ್ತು ಗುಣಮಟ್ಟದ ಆಧಾರದ ಮೇಲೆ ಗೂಡಿಗೆ ಪ್ರೋತ್ಸಾಹಧನ	Full Powers	(ಪ್ರತಿ ಸಲ) ರೂ.75,001 ರಿಂದ ರೂ.1,50,000 ವರೆಗೆ	(ಪ್ರತಿ ಸಲ) ರೂ.75,000/– ರವರೆಗೆ	(ಪ್ರತಿ ಸಲ) ರೂ.25,000/– ರವರೆಗೆ	(ಪ್ರತಿ ಸಲ) ರೂ.15,000/– ರವರೆಗೆ

ರೇಷ್ಮೆ ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ವಿತ್ತೀಯ ಪ್ರಾಧಿಕಾರದಡಿ ಸಹಾಯಧನ / ಪ್ರೋತ್ಸಾಹಧನ ಮಂಜೂರಾತಿ ನೀಡುವ ಬಗ್ಗೆ ಆದೇಶ ನೀಡುವಂತೆ ಹಾಗೂ ಸರ್ಕಾರದಿಂದ ವಿತ್ತೀಯ ಅಧಿಕಾರ ಪ್ರತ್ಯಾಯೋಜನೆ ಮಾಡಿ ಆದೇಶ ಹೊರಡಿಸುವವರೆಗೆ ತಡೆಹಿಡಿಯಲಾಗಿದೆ ಎಂದು ಹೇಳಿರುವ ಆದೇಶಗಳ ತಡೆ ತೆರವುಗೊಳಿಸಿ ಶೀಘ್ರ ಆದೇಶ ನೀಡಿದ್ದಲ್ಲಿ ಮಾತ್ರ ಇಲಾಖೆಯ ಕಾರ್ಯಕ್ರಮಗಳಲ್ಲಿ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ ಎಂದು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಕೋರಿರುತ್ತಾರೆ.

ರೇಷ್ಮೆ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಮೈಸೂರು ಆರ್ಥಿಕ ಅಧಿಕಾರಿಗಳ ಕೈಪಿಡಿಯ ನಿಯಮ 5 ರಲ್ಲಿ ಯಾವುದೇ ಪ್ರಾಧಿಕಾರವು ತನಗೆ ನೀಡಿದ ಅಧಿಕಾರವನ್ನು ಇತರೇ ಪ್ರಾಧಿಕಾರಕ್ಕೆ ಅಥವಾ ಕೆಳಗಿನ ಅಧಿಕಾರಿಗಳಿಗೆ ನೀಡಲು ಅವಕಾಶವಿರುವುದಿಲ್ಲ ಮತ್ತು ಸರ್ಕಾರ ಮಾತ್ರ ಅಂತಹ ಅಧಿಕಾರವನ್ನು ಪ್ರತ್ಯಾಯೋಜಿಸಬಹುದಾಗಿರುತ್ತದೆ. ಆದ್ದರಿಂದ ವಿಕೇಂದ್ರಿಕರಣ ಮತ್ತು ಆರ್ಥಿಕ ಪ್ರತ್ಯಾಯೋಜನೆಯನ್ನು ನೀಡಿ ಇಲಾಖೆಯು ಕ್ಷೇತ್ರಾಧಿಕಾರಿಗಳಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಹೊರಡಿಸಿರುವ ಮೇಲೆ ಓದಲಾದ ಕ್ರಮ ಸಂಖ್ಯೆ(1) ರಿಂದ (3)ರ ನಡವಳಿಗಳನ್ನು ಹಿಂದಕ್ಕೆ ಪಡೆಯಲಾಗಿದೆ ಹಾಗೂ ಫಲಾನುಭವಿ ಆಧಾರಿತ

ಕಾರ್ಯಕ್ರಮಗಳಿಗೆ ಸಹಾಯಧನ/ಪ್ರೋತ್ಸಾಹಧನ ಮತ್ತು ಉತ್ಪಾದಕತೆ ಮತ್ತು ಗುಣಮಟ್ಟದ ಆಧಾರದ ಮೇಲೆ ಗೂಡಿಗೆ ಪ್ರೋತ್ಸಾಹಧನ ಇವುಗಳಿಗೆ ಸಂಬಂಧಿಸಿದಂತೆ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯನ್ನು ರೇಷ್ಮೆ ಸಹಾಯಕ ನಿರ್ದೇಶಕರ ಮಟ್ಟದವರೆಗೆ ಮಾತ್ರ ನೀಡಲು ಸರ್ಕಾರವು ನಿರ್ಧರಿಸಿರುವ ಕಾರಣ ಈ ಆದೇಶ.

ಸರ್ಕಾರದ ಆದೇಶ ಸಂ: ತೋಇ 103 ರೇಕೃವಿ 2013, ಬೆಂಗಳೂರು, ದಿನಾಂಕ: 05-09-2013

ರೇಷ್ಮೆ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಮೈಸೂರು ಆರ್ಥಿಕ ಅಧಿಕಾರಿಗಳ ಕೈಪಿಡಿಯ ನಿಯಮ 5 ರಲ್ಲಿ ಯಾವುದೇ ಪ್ರಾಧಿಕಾರವು ತನಗೆ ನೀಡಿದ ಅಧಿಕಾರವನ್ನು ಇತರೇ ಪ್ರಾಧಿಕಾರಕ್ಕೆ ಅಥವಾ ಕೆಳಗಿನ ಅಧಿಕಾರಿಗಳಿಗೆ ನೀಡಲು ಅವಕಾಶವಿರುವುದಿಲ್ಲ ಮತ್ತು ಸರ್ಕಾರ ಮಾತ್ರ ಅಂತಹ ಅಧಿಕಾರವನ್ನು ಪ್ರತ್ಯಾಯೋಜಿಸಬಹುದಾಗಿರುತ್ತದೆ. ಆದ್ದರಿಂದ ವಿಕೇಂದ್ರಿಕರಣ ಮತ್ತು ಆರ್ಥಿಕ ಪ್ರತ್ಯಾಯೋಜನೆಯನ್ನು ನೀಡಿ ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಹೊರಡಿಸಿರುವ ಮೇಲೆ ಓದಲಾದ ಕ್ರಮ ಸಂಖ್ಯೆ (1) ರಿಂದ (3)ರ ನಡವಳಿಗಳನ್ನು ಹಿಂದಕ್ಕೆ ಪಡೆಯಲಾಗಿದೆ ಹಾಗೂ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಸಹಾಯಧನ/ಪ್ರೋತ್ಸಾಹಧನ ಮತ್ತು ಉತ್ಪಾದಕತೆ ಮತ್ತು ಗುಣಮಟ್ಟದ ಆಧಾರದ ಮೇಲೆ ಗೂಡಿಗೆ ಪ್ರೋತ್ಸಾಹಧನ ಇವುಗಳಿಗೆ ಸಂಬಂಧಿಸಿದಂತೆ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯನ್ನು ರೇಷ್ಮೆ ಸಹಾಯಕ ನಿರ್ದೇಶಕರ ಮಟ್ಟದವರೆಗೆ ಮಾತ್ರ ನೀಡಿ ಸರ್ಕಾರವು ಆದೇಶಿಸಿದೆ.

ಕ್ರ.ಸಂ	ಕಾರ್ಯ ಕ್ರಮದ ವಿವರ	ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು	ರೇಷ್ಮೆ ಜಂಟಿ ನಿರ್ದೇಶಕರು	ರೇಷ್ಮೆ ಉಪ ನಿರ್ದೇಶಕರು	ರೇಷ್ಮೆ ಸಹಾಯಕ ನಿರ್ದೇಶಕರು
1.	ಫಲಾನುಭವಿ ಆಧಾರಿತ ಕಾರ್ಯಕ್ರಮಗಳಿಗೆ ಸಹಾಯಧನ/ಪ್ರೋತ್ಸಾಹಧನ	Full Powers	(ಪ್ರತಿ ಪ್ರಕರಣ) ರೂ.75,001 ರಿಂದ ರೂ.1,50,000 ವರೆಗೆ	(ಪ್ರತಿ ಪ್ರಕರಣ) ರೂ.25,001 ರಿಂದ ರೂ.75,000 ರವರೆಗೆ	(ಪ್ರತಿ ಪ್ರಕರಣ) ರೂ.25,000 ರವರೆಗೆ
2.	ಉತ್ಪಾದಕತೆ ಮತ್ತು ಗುಣಮಟ್ಟದ ಆಧಾರದ ಮೇಲೆ ಗೂಡಿಗೆ ಪ್ರೋತ್ಸಾಹಧನ	Full Powers	(ಪ್ರತಿ ಸಲ) ರೂ.75,001 ರಿಂದ ರೂ.1,50,000 ವರೆಗೆ	(ಪ್ರತಿ ಸಲ) ರೂ.75,000/- ರವರೆಗೆ	(ಪ್ರತಿ ಸಲ) ರೂ.25,000/- ರವರೆಗೆ

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 380 ವೆಚ್ಚ-4/2013, ದಿನಾಂಕ: 02-09-2013ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಬಿ.ವಿಜಯಕುಮಾರ್,

ಸರ್ಕಾರದ ಅಧೀನ ಕಾರ್ಯದರ್ಶಿ,

ತೋಟಗಾರಿಕೆ ಇಲಾಖೆ (ರೇಷ್ಮೆ).

P.R. 941

SC - 100

ಹಿಂದುಳಿದ ವರ್ಗಗಳ ಕಲ್ಯಾಣ ಸಚಿವಾಲಯ

ವಿಷಯ: ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಅನುಷ್ಠಾನಗೊಳಿಸಲಾಗುತ್ತಿರುವ ರಾಜ್ಯದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮವನ್ನು ಪರಿಷ್ಕರಿಸಿ, ಇದರ ಅನುಷ್ಠಾನಕ್ಕಾಗಿ ಹೊಸದಾಗಿ ಮಾರ್ಗಸೂಚಿಗಳನ್ನು ಹೊರಡಿಸುವ ಕುರಿತು.

ಓದಲಾಗಿದೆ:

1. ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 386 ಎಸಿಡಬ್ಲ್ಯೂ 77 ದಿನಾಂಕ: 17-11-1977.
2. ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 75 ಬಿಪಿಎಸ್ 83 ದಿನಾಂಕ: 17-06-1985.
3. ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಪರಿಷ್ಕೃತ ಆದೇಶ ಸಂಖ್ಯೆ:11014/21/2006-ಬಿಸಿ ದಿನಾಂಕ:11-08-2011.
4. ದಿನಾಂಕ:12-07-2013 ರಂದು ಮಂಡಿಸಿದ 2013-14ನೇ ಸಾಲಿನ ಪರಿಷ್ಕೃತ ಆಯವ್ಯಯ, ಭಾಷಣದಲ್ಲಿನ ಘೋಷಣೆ ಕಂಡಿಕೆ ಸಂಖ್ಯೆ:271.
5. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಏಕ ಕಡತ ಪ್ರಸ್ತಾವನೆ ಸಂಖ್ಯೆ: ಹಿಂವಕಇ/ವಿವೇ/ಸಿಆರ್-16/2013-14, ದಿನಾಂಕ: 16-08-2013.

ಪ್ರಸ್ತಾವನೆ :

ಮೇಲೆ ಓದಲಾದ ಉಲ್ಲೇಖ(1) ಮತ್ತು (2)ರಲ್ಲಿನ ಆದೇಶಗಳಲ್ಲಿ ಹಿಂದುಳಿದ ವರ್ಗಗಳ ಡೇ ಸ್ಕಾಲರ್ ವಿದ್ಯಾರ್ಥಿಗಳಿಗೆ ಮೆಟ್ರಿಕ್-ನಂತರದ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಲು ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು.

2013–14ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ರಾಜ್ಯ ಮೆಟ್ರಿಕ್–ನಂತರದ ವಿದ್ಯಾರ್ಥಿವೇತನ ದರಗಳನ್ನು ಭಾರತ ಸರ್ಕಾರದ ಮೆಟ್ರಿಕ್–ನಂತರದ ವಿದ್ಯಾರ್ಥಿವೇತನ ದರಗಳಿಗೆ ಸರಿಸಮವಾಗಿ ಹೆಚ್ಚಿಸಲಾಗುವುದು." ಎಂದು ಘೋಷಿಸಲಾಗಿದೆ.

ವಿವಿಧ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ಡೇ ಸ್ಕಾಲರ್ ವಿದ್ಯಾರ್ಥಿಗಳಿಗೆ, ಹಾಲಿ ಚಾಲ್ತಿಯಲ್ಲಿರುವ ರಾಜ್ಯ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮದಡಿಯಲ್ಲಿ, ವಿವಿಧ ಕೋರ್ಸುಗಳಿಗೆ 1977ರಲ್ಲಿ ನಿಗಧಿಪಡಿಸಿರುವ ದರಗಳು ಕಡಿಮೆ ಇರುವುದರಿಂದ ಹಾಗೂ ನಿಗದಿಪಡಿಸಲಾಗಿದ್ದ ಷರತ್ತುಗಳು ಪ್ರಸ್ತುತವಲ್ಲದ ಕಾರಣ, ಈ ಆದೇಶಗಳನ್ನು ನಿರಶನಗೊಳಿಸಿ, ಓದಲಾದ (3)ರಲ್ಲಿನ ಭಾರತ ಸರ್ಕಾರದ ಆದೇಶದಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಯೋಜನೆಯಡಿ ನಿಗದಿಪಡಿಸಿರುವ ವಿವಿಧ ಕೋರ್ಸುಗಳ ಗುಂಪುವಾರು ವಿದ್ಯಾರ್ಥಿ ವೇತನ ದರಗಳಿಗೆ ಸರಿಸಮವಾಗಿ ಪರಿಷ್ಕರಿಸಿ, ಅರ್ಹತಾ ನಿಬಂಧನೆಗಳನ್ನು ಪರಿಷ್ಕರಿಸಿ, ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸುವಂತೆ, ಓದಲಾದ(5)ರಲ್ಲಿನ ಪ್ರಸ್ತಾವನೆಯಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಸರ್ಕಾರವನ್ನು ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 518 ಬಿಎಂಎಸ್ 2013, ಬೆಂಗಳೂರು, ದಿನಾಂಕ: 03–09–2013

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಮೇಲೆ ಓದಲಾದ (1) ಮತ್ತು (2)ರಲ್ಲಿನ ಸರ್ಕಾರದ ಆದೇಶಗಳನ್ನು ನಿರಶನಗೊಳಿಸಿ, 2013–14ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಡೇ ಸ್ಕಾಲರ್ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರ ವಿವಿಧ ಕೋರ್ಸುಗಳ ಗುಂಪುವಾರು ನಿಗದಿಪಡಿಸಿರುವ ದರಗಳಿಗೆ ಸರಿಸಮವಾಗಿ ವಿದ್ಯಾರ್ಥಿ ವೇತನ ದರಗಳನ್ನು ಪರಿಷ್ಕರಿಸಿ ಮಂಜೂರಾತಿ ನೀಡಲಾಗಿದೆ. ಈ "ಮೆಟ್ರಿಕ್–ನಂತರದ ವಿದ್ಯಾರ್ಥಿವೇತನ" ಕಾರ್ಯಕ್ರಮವನ್ನು ಈ ಆದೇಶಕ್ಕೆ ಲಗತ್ತಿಸಲಾಗಿರುವ ಅನುಬಂಧ–1 ರಲ್ಲಿರುವ ಮಾರ್ಗಸೂಚಿಗಳಂತೆ ಜಾರಿಗೊಳಿಸಲು ಆದೇಶಿಸಿದೆ. ಗುಂಪುವಾರು ಕೋರ್ಸುಗಳ ವಿವರಗಳು ಅನುಬಂಧ–2ರಲ್ಲಿ ತೋರಿಸಲಾಗಿದೆ.

ಈ ಯೋಜನೆಯಡಿ ವೆಚ್ಚವನ್ನು ಆಯಾ ವರ್ಷದ ಆರ್ಥಿಕ ಸಾಲಿನಲ್ಲಿ ಒದಗಿಸಲಾಗುವ ಅನುದಾನದ ಮಿತಿಗೆ ಒಳಪಟ್ಟು ಭರಿಸತಕ್ಕದ್ದು.

ಇದಕ್ಕೆ ತಗಲುವ ವೆಚ್ಚವನ್ನು ರಾಜ್ಯವಲಯ ಯೋಜನೆ ಲೆಕ್ಕಶೀರ್ಷಿಕೆ 2225–03–277–02–51 ಮತ್ತು ಜಿಲ್ಲಾವಲಯ ಯೋಜನೆ ಮತ್ತು ಯೋಜನೇತರ ಲೆಕ್ಕಶೀರ್ಷಿಕೆ 2225–00–103–0–66ರಡಿಯಲ್ಲಿ ಒದಗಿಸುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 606 ವೆಚ್ಚ–3/13 ದಿನಾಂಕ:31–08–2013 ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ 43 ಐಎಂಎಂ 2013 ದಿನಾಂಕ:28–08–2013ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಚಂದ್ರಶೇಖರ್,

ಸರ್ಕಾರದ ಅಧೀನ ಕಾರ್ಯದರ್ಶಿ–2,

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 518 ಬಿಎಂಎಸ್ 2013ಕ್ಕೆ, ದಿನಾಂಕ: 03–09–2013ಕ್ಕೆ ಅನುಬಂಧ–1

ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಡೇ ಸ್ಕಾಲರ್ ವಿದ್ಯಾರ್ಥಿಗಳಿಗೆ ಪರಿಷ್ಕೃತ "ಮೆಟ್ರಿಕ್–ನಂತರದ ವಿದ್ಯಾರ್ಥಿವೇತನ" ಕಾರ್ಯಕ್ರಮ ಅನುಷ್ಠಾನದ ಮಾರ್ಗಸೂಚಿಗಳು.

(ಸಮಾಜ ಕಲ್ಯಾಣ / ಪರಿಶಿಷ್ಟ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ವ್ಯಾಪ್ತಿಗೆ ಬರುವ ವಿದ್ಯಾರ್ಥಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಸೌಲಭ್ಯಗಳನ್ನು ಪಡೆಯಲು ಅರ್ಹರಿರುವುದಿಲ್ಲ.

1. ಯೋಜನೆಯ ಉದ್ದೇಶ:

1. (ಅ) ಯಾವುದೇ ಇಲಾಖೆಯ, ವಿದ್ಯಾರ್ಥಿನಿಲಯದಲ್ಲಿ / ವಸತಿ ಕಾಲೇಜುಗಳಲ್ಲಿ, ಪ್ರವೇಶ ದೊರೆಯದ ಹಾಗೂ ಊಟ ಮತ್ತು ವಸತಿ ಸಹಾಯ ಯೋಜನೆಯಡಿ ಆಯ್ಕೆಯಾಗದ, ಮೆಟ್ರಿಕ್–ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ಡೇ ಸ್ಕಾಲರ್ ವಿದ್ಯಾರ್ಥಿಗಳಿಗೆ "ಮೆಟ್ರಿಕ್–ನಂತರದ ವಿದ್ಯಾರ್ಥಿವೇತನ" ಸೌಲಭ್ಯವನ್ನು ನೀಡುವುದು, ಈ ಯೋಜನೆಯ ಉದ್ದೇಶ.

(ಆ) ಈ ಯೋಜನೆಯಡಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ, ಪ್ರತಿ ತಿಂಗಳಿಗೆ ಈ ಕೆಳಗಿನಂತೆ ಕೋರ್ಸಿನ ಗುಂಪುವಾರು, ನಿಗದಿಪಡಿಸಿರುವ ದರಗಳಂತೆ, ಶೈಕ್ಷಣಿಕ ಅವಧಿಯ 10 ತಿಂಗಳಿಗೆ, ಇತರೆ ನಿಬಂಧನೆಗಳಿಗೊಳಪಟ್ಟು ಅವರು ಯಾವುದಾದರೂ ಕೋರ್ ಬ್ಯಾಂಕಿಂಗ್ ವ್ಯವಸ್ಥೆ ಇರುವ ಬ್ಯಾಂಕಿನಲ್ಲಿ ತೆರೆದಿರುವ ಬ್ಯಾಂಕ್ ಖಾತೆಗೆ ಆನ್‌ಲೈನ್ ಮೂಲಕ ಜಮಾ ಮಾಡುವುದು.

ಗುಂಪು –ಎ	ರೂ.350/–
ಗುಂಪು –ಬಿ	ರೂ.335/–
ಗುಂಪು –ಸಿ	ರೂ.210/–
ಗುಂಪು –ಡಿ	ರೂ.160/–

(ಇ) ವಿದ್ಯಾರ್ಥಿಗಳು: (i) ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶ, (ii) ಊಟ ಮತ್ತು ವಸತಿ ಸಹಾಯ ಯೋಜನೆ ಮತ್ತು (iii) ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ – ಇವುಗಳಲ್ಲಿ ಯಾವುದಾದರೂ ಒಂದು ಸೌಲಭ್ಯಕ್ಕೆ ಮಾತ್ರ ಅರ್ಹರಿರುತ್ತಾರೆ.

(ಈ) ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾದವರು, ಆನ್‌ಲೈನ್ (Online) ಮೂಲಕ ಅರ್ಜಿ ಸಲ್ಲಿಸಬೇಕು.

II. ಅರ್ಹತೆ:

1. (ಅ) ಭಾರತದ ಪ್ರಜೆಯಾಗಿದ್ದು, ಕರ್ನಾಟಕ ಖಾಯಂ ನಿವಾಸಿ ಆಗಿರಬೇಕು.

(ಆ) ಭಾರತ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಧಿಸೂಚಿಸಿರುವ, ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿರಬೇಕು.

(ಇ) ಕರ್ನಾಟಕದ ಶಾಸನಬದ್ಧ ವಿಶ್ವವಿದ್ಯಾಲಯಗಳ ಅಧೀನಕ್ಕೆ ಒಳಪಡುವ, ಸರ್ಕಾರಿ / ಸ್ಥಳೀಯ ಸಂಸ್ಥೆ/ ಅನುದಾನಿತ ಸಂಸ್ಥೆಗಳು / ಮಾನ್ಯತೆ ಪಡೆದ ಅನುದಾನ ರಹಿತ ಖಾಸಗಿ ಸಂಸ್ಥೆಗಳಲ್ಲಿ – ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಾಗಿರಬೇಕು.

(2) (ಅ) ಈ ಮೇಲಿನ ಸೌಲಭ್ಯ ಪಡೆಯಲು, ವಿದ್ಯಾರ್ಥಿಯ, ತಂದೆ–ತಾಯಿ/ಪೋಷಕರ ಕುಟುಂಬದ, ಒಟ್ಟು ವಾರ್ಷಿಕ ವರಮಾನ (Gross Annual Income) ಈ ಕೆಳಗೆ ನಿಗದಿಪಡಿಸಿದ ಮಿತಿಯೊಳಗೆ ಇರಬೇಕು.

(i) ಪ್ರವರ್ಗ–1 ರ ವಿದ್ಯಾರ್ಥಿಗಳಿಗೆ ರೂ.2.50 ಲಕ್ಷ.

(ii) ಪ್ರವರ್ಗ–2ಎ, 3ಎ ಮತ್ತು 3ಬಿ ವಿದ್ಯಾರ್ಥಿಗಳಿಗೆ ರೂ.1.00 ಲಕ್ಷ.

(ಆ) ಈ ಯೋಜನೆಯಡಿ ಪ್ರಥಮ ಬಾರಿಗೆ ಸೌಲಭ್ಯವನ್ನು ಪಡೆಯಲು, ಈ ಹಿಂದಿನ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ, ಈ ಕೆಳಗಿನಂತೆ ಕನಿಷ್ಠ ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

ಪ್ರವರ್ಗ–1	–40%
ಪ್ರವರ್ಗ–2ಎ, 3ಎ,3ಬಿ	–50%

(ಇ) ನವೀಕರಣ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕಾಗಿದ್ದಲ್ಲಿ, ಅವರು ಈ ಹಿಂದಿನ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ, ಈ ಕೆಳಗಿನಂತೆ ಕನಿಷ್ಠ ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

ಪ್ರವರ್ಗ–1	–50%
ಪ್ರವರ್ಗ–2ಎ, 3ಎ,3ಬಿ	–60%

(ಒಂದು ವೇಳೆ, ವೈದ್ಯಕೀಯ ಕಾರಣಗಳಿಂದಾಗಿ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ ಅಂತಹವರು, ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು).

3. (ಅ) ಸಮಾನ ಕೋರ್ಸುಗಳಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ವ್ಯಾಸಂಗ ಮಾಡುತ್ತಿದ್ದಲ್ಲಿ, ಅಂತಹವರು ಅರ್ಹರಿರುವುದಿಲ್ಲ. (ಉದಾ: ಬಿ.ಎ ನಂತರ ಬಿ.ಕಾಂ, ಎಂ.ಎ (ಕನ್ನಡ) ನಂತರ ಎಂ.ಎ (ಇಂಗ್ಲೀಷ್), ಬಿ.ಎಡ್ ನಂತರ ಎಲ್.ಎಲ್.ಬಿ, ಇತ್ಯಾದಿಗಳಿಗೆ ಪ್ರವೇಶ ಪಡೆದಿದ್ದಲ್ಲಿ)

(ಆ) ಸ್ನಾತಕೋತ್ತರ ವೈದ್ಯಕೀಯ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು, ಕೋರ್ಸಿನ ಅವಧಿಯಲ್ಲಿ ಮೆಡಿಕಲ್ ಪ್ರಾಕ್ಟೀಸ್ ಮಾಡುತ್ತಿದ್ದಲ್ಲಿ, ಈ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.

(ಇ) ಕಲೆ, ವಿಜ್ಞಾನ, ಹಾಗೂ ವಾಣಿಜ್ಯ ಕೋರ್ಸುಗಳ, ಪದವಿ ಅಥವಾ ಸ್ನಾತಕೋತ್ತರ ಪದವಿಗಳಲ್ಲಿ ಉತ್ತೀರ್ಣ / ಅನುತ್ತೀರ್ಣರಾದವರು ಅಂಗೀಕೃತ ವೃತ್ತಿಪರ ಅಥವಾ ತಾಂತ್ರಿಕ ಸರ್ಟಿಫಿಕೇಟ್, ಡಿಪ್ಲೋಮ, ಪದವಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡಿದ್ದಲ್ಲಿ, ಹಾಗೂ ಇತರೆ ರೀತಿ ಅರ್ಹರಿದ್ದಲ್ಲಿ ಅವರು ಈ ಯೋಜನೆಯ ಅಡಿ ಸೌಲಭ್ಯಗಳಿಗೆ ಅರ್ಹರಿರುತ್ತಾರೆ. ಒಂದಕ್ಕಿಂತ ಹೆಚ್ಚು ಬಾರಿ ಕೋರ್ಸುಗಳ ಬದಲಾವಣೆ ಮಾಡಿಕೊಂಡವರು ಅರ್ಹರಿರುವುದಿಲ್ಲ.

(ಈ) ಒಂದೇ ಕುಟುಂಬದ ಇಬ್ಬರು ಗಂಡು ಮಕ್ಕಳು ಮಾತ್ರ ಈ ಯೋಜನೆಗೆ ಅರ್ಹರು. ಆದರೆ, ಈ ನಿರ್ಬಂಧ ಹೆಣ್ಣು ಮಕ್ಕಳಿಗೆ ಅನ್ವಯಿಸುವುದಿಲ್ಲ.

4. 2014–15ನೇ ಸಾಲಿನಿಂದ, ಈ ಸೌಲಭ್ಯವನ್ನು ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು, ಕಡ್ಡಾಯವಾಗಿ ಅವರ ಹೆಸರಿನಲ್ಲಿ **ಆಧಾರ್ ಸಂಖ್ಯೆಯನ್ನು** ಹೊಂದಿರತಕ್ಕದ್ದು.

III. ಅರ್ಜಿ ಸಲ್ಲಿಸುವ ವಿಧಾನ:

1. (ಅ) ಈ ಯೋಜನೆಯಡಿ ಸಹಾಯಧನ ಪಡೆಯಲು ಇಚ್ಛಿಸುವ ಹಾಗೂ ಅರ್ಹತೆಯುಳ್ಳ ವಿದ್ಯಾರ್ಥಿಗಳು, ನಿಗಧಿತ ಅರ್ಜಿ ನಮೂನೆಯಲ್ಲಿ, ಆನ್‌ಲೈನ್ ಮೂಲಕ ಎಲ್ಲಾ ವಿವರಗಳನ್ನು ನಮೂದಿಸಿ, ಅರ್ಜಿ ಸಲ್ಲಿಸಬೇಕು.

(ಆ) ಯಾವುದಾದರೂ ಕೋರ್ ಬ್ಯಾಂಕಿಂಗ್ ವ್ಯವಸ್ಥೆ ಇರುವ ಬ್ಯಾಂಕಿನಲ್ಲಿ, ವಿದ್ಯಾರ್ಥಿಯ ಹೆಸರಿನಲ್ಲಿ (ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿ ದಾಖಲಾಗಿರುವ ರೀತಿಯಲ್ಲಿ), ಉಳಿತಾಯ ಖಾತೆಯನ್ನು ತೆರೆದು, ವಿವರಗಳನ್ನು ಅರ್ಜಿಯಲ್ಲಿ ನಮೂದಿಸಬೇಕು.

(ಇ) ಅರ್ಜಿಯೊಂದಿಗೆ ಲಗತ್ತಿಸಬೇಕಾದ ಎಲ್ಲಾ ಮೂಲ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಅಪ್‌ಲೋಡ್ ಮಾಡಬೇಕು.

IV. ಅನುದಾನ ಹಂಚಿಕೆ ವಿಧಾನ:

(ಅ) ಆಯಾ ಆರ್ಥಿಕ ವರ್ಷಕ್ಕೆ ಲಭ್ಯವಾಗುವ ಅನುದಾನವನ್ನು ಪ್ರವರ್ಗವಾರು ಈ ಕೆಳಗಿನಂತೆ ಶೇಕಡವಾರು ಹಂಚಿಕೆ ಮಾಡಬೇಕು.

ಪ್ರವರ್ಗ–1	–	15%
ಪ್ರವರ್ಗ–2ಎ	–	53%
ಪ್ರವರ್ಗ–3ಎ	–	14%
ಪ್ರವರ್ಗ–3ಬಿ	–	18%
ಒಟ್ಟು	–	**100%**

(ಆ) ಈ ಮೇಲಿನಂತೆ ಪ್ರವರ್ಗವಾರು ಹಂಚಿಕೆ ಮಾಡಿದ ನಂತರ, ಪ್ರತಿ ಪ್ರವರ್ಗವಾರು ಹಂಚಿಕೆ ಮಾಡಲಾದ ಮೊತ್ತವನ್ನು ಕೋರ್ಸಿನ ಗುಂಪುವಾರು ಸ್ವೀಕರಿಸಲಾಗುವ ಅರ್ಜಿಗಳ ಸಂಖ್ಯೆಗೆ ಅನುಗುಣವಾಗಿ **Weighted average** ಪ್ರಕಾರ ಹಂಚಿಕೆ ಮಾಡಬೇಕು.

(ಇ) ಆ ಆರ್ಥಿಕ ವರ್ಷಕ್ಕೆ ಲಭ್ಯವಾಗುವ ಅನುದಾನದ ಮಿತಿಗೆ ಒಳಪಟ್ಟು, ಅರ್ಹತೆ ಮತ್ತು ಆದಾಯಕ್ಕೆ **(Merit cum Means)** ಅನುಗುಣವಾಗಿ ಮಂಜೂರು ಮಾಡಬೇಕು.

V. ಕಾಲೇಜು ಪ್ರಾಂಶುಪಾಲರು ಮತ್ತು ಇಲಾಖೆಯ "ಪರಿಶೀಲನಾ ಅಧಿಕಾರಿ" ಕೈಗೊಳ್ಳಬೇಕಾದ ಕ್ರಮಗಳು:

(ಅ) ಆ ಕಾಲೇಜಿನ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಗಳ ಸ್ವೀಕೃತಿ ಪತ್ರ ಮತ್ತು ಅಪ್‌ಲೋಡ್ ಮಾಡಿರುವ ಎಲ್ಲಾ ದಾಖಲೆಗಳ, ದೃಢೀಕೃತ ಪ್ರತಿಗಳನ್ನು ವಿದ್ಯಾರ್ಥಿಗಳಿಂದ ಪಡೆದುಕೊಳ್ಳಬೇಕು. ಸದರಿ ಮಾಹಿತಿಯನ್ನು ಅವರು ಸಲ್ಲಿಸಿರುವ ದಾಖಲೆಗಳನ್ನು, ಕಾಲೇಜಿನಲ್ಲಿ ಲಭ್ಯವಿರುವ ಮಾಹಿತಿಗಳೊಂದಿಗೆ ಪರಿಶೀಲಿಸಿ ಆನ್‌ಲೈನ್‌ನಲ್ಲಿ ದೃಢೀಕರಿಸಬೇಕು. ಈ ರೀತಿ ದೃಢೀಕರಿಸಲ್ಪಟ್ಟ ಪಟ್ಟಿಯ ಹಾರ್ಡ್‌ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು, ಪ್ರತಿ ವಿದ್ಯಾರ್ಥಿವಾರು ಅಗತ್ಯ ದಾಖಲಾತಿಗಳನ್ನು, ಅನುಕ್ರಮವಾಗಿ ಜೋಡಿಸಿ ಸಿದ್ಧಪಡಿಸಿಕೊಳ್ಳಬೇಕು.

(ಆ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ, ಅಧಿಕೃತ "**ಪರಿಶೀಲನಾ ಅಧಿಕಾರಿ**" ಕಾಲೇಜಿನ ಪ್ರಾಂಶುಪಾಲರು ಈ ಮೇಲಿನಂತೆ ಸಿದ್ಧಪಡಿಸಿದ ದೃಢೀಕೃತ ಪಟ್ಟಿಯಲ್ಲಿ ನಮೂದಾಗಿರುವ ಎಲ್ಲ ವಿದ್ಯಾರ್ಥಿಗಳ ದಾಖಲಾತಿಗಳು ಸರಿ ಇರುವ ಬಗ್ಗೆ ಹಾಗೂ ಈ ಸೌಲಭ್ಯಕ್ಕೆ ಅವರು ಅರ್ಹರಿರುವ ಬಗ್ಗೆ **ಆನ್‌ಲೈನ್‌ನಲ್ಲಿ** ದೃಢೀಕರಿಸಬೇಕು. ಸದರಿ ದಾಖಲಾತಿಗಳನ್ನು ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಗೆ ಸಲ್ಲಿಸಬೇಕು.

(ಇ) ಈ ರೀತಿ ಸಲ್ಲಿಸಿದ ಮಾಹಿತಿ ಆಧಾರದ ಮೇಲೆ ತಾಲ್ಲೂಕು ಮಟ್ಟದ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ, ಪರಿಶೀಲನೆ ಮಾಡಿ ಅರ್ಹ ವಿದ್ಯಾರ್ಥಿಗಳಿಗೆ "ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ" ವನ್ನು ಮಂಜೂರು ಮಾಡಬೇಕು.

(ಈ) ಈ ಮೇಲಿನಂತೆ ಮಂಜೂರು ಮಾಡಿದ, ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ, ಪ್ರಾಂಶುಪಾಲರು **ಪ್ರತಿ ತಿಂಗಳ ಹಾಜರಾತಿಯನ್ನು,** ಅವರ ಹೆಸರು ಮತ್ತು ತರಗತಿಯ ವಿವರಗಳನ್ನು ನಮೂದಿಸಿ ದೃಢೀಕರಿಸಿ, ನಂತರದ ತಿಂಗಳ ಮೊದಲನೇ ವಾರದಲ್ಲಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವೆಬ್‌ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು.

VI. ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು ಅನುದಾನವನ್ನು ಮರು ಹಂಚಿಕೆ ಮಾಡಲು ಅನುಸರಿಸಬೇಕಾದ ಕಾರ್ಯವಿಧಾನ:

(ಅ) ಆಯಾ ಜಿಲ್ಲೆಗೆ ಆಯಾ ಆರ್ಥಿಕ ವರ್ಷದಲ್ಲಿ ಲಭ್ಯವಿರುವ ಅನುದಾನವನ್ನು ಕೋರ್ಸಿನ ಗುಂಪುವಾರು "ಅನುದಾನ ಹಂಚಿಕೆ ವಿಧಾನ" ದಲ್ಲಿ ಸೂಚಿಸಿರುವಂತೆ, ವಿವಿಧ ಕೋರ್ಸುಗಳ ಗುಂಪುಗಳಿಗೆ, ವಿವಿಧ ಪ್ರವರ್ಗಗಳ ವಿದ್ಯಾರ್ಥಿಗಳಿಗೆ ಅರ್ಹತೆ ಮತ್ತು ಆದಾಯಕ್ಕೆ **(Merit cum Means)** ಅನುಗುಣವಾಗಿ, ವಿದ್ಯಾರ್ಥಿಗಳ ಮೆರಿಟ್ ಪಟ್ಟಿಯನ್ನು ತಯಾರಿಸಬೇಕು ಮತ್ತು ಈ ಮೆರಿಟ್ ಪಟ್ಟಿಯಂತೆ, ತಾಲ್ಲೂಕುವಾರು, ಅನುದಾನವನ್ನು ಹಂಚಿಕೆ ಮಾಡಬೇಕು.

(ಆ) ಜಿಲ್ಲಾ ಪಂಚಾಯಿತಿಯಿಂದ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ನೇರವಾಗಿ ಅನುದಾನವನ್ನು ಮೇಲಿನಂತೆ ಮರು ಹಂಚಿಕೆ ಮಾಡಿ ಬಿಡುಗಡೆ ಮಾಡಬೇಕು.

(ಇ) ಸದರಿ ಮೆರಿಟ್ ಪಟ್ಟಿಯ ಹಾರ್ಡ್ ಪ್ರತಿಯನ್ನು ಸಂಬಂಧಪಟ್ಟ ತಾಲ್ಲೂಕು ಅಧಿಕಾರಿಗಳಿಗೆ ಒದಗಿಸುವುದು.

VII. ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ವಿದ್ಯಾರ್ಥಿ ವೇತನ ಮಂಜೂರು ಮಾಡುವ ಕಾರ್ಯವಿಧಾನ:

(ಅ) ಈ ಯೋಜನೆಯಡಿ ಮಂಜೂರಾದ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಕೋರ್ಸಿನ ಗುಂಪುವಾರು, ನಿಗದಿಪಡಿಸಿರುವ ದರದಂತೆ, ಆಯಾ ಶೈಕ್ಷಣಿಕ ವರ್ಷದ 10 ತಿಂಗಳಿನ ಮೊತ್ತವನ್ನು, **ಎರಡು ಕಂತುಗಳಲ್ಲಿ** ಆರ್ಥಿಕ ವರ್ಷದ ಒಳಗಾಗಿ ಜಮಾ ಮಾಡಬೇಕು.

(ಆ) ಎರಡನೇ ಕಂತಿನ ವಿದ್ಯಾರ್ಥಿ ವೇತನವನ್ನು ಆ ವಿದ್ಯಾರ್ಥಿಯ ಖಾತೆಗೆ ಜಮಾ ಮಾಡಬೇಕಾಗಿದ್ದಲ್ಲಿ, ಆ ವಿದ್ಯಾರ್ಥಿಯ ಹಿಂದಿನ ಅರ್ಧವಾರ್ಷಿಕದಲ್ಲಿನ ಕಾಲೇಜಿನ ಹಾಜರಾತಿ ಶೇಕಡ 75 ರಷ್ಟು ಇರಬೇಕು.

(ಇ) ಮಂಜೂರಾತಿ ಆದೇಶ ಮತ್ತು ಬ್ಯಾಂಕುವಾರು ಬಿಲ್ಲುಗಳನ್ನು ಇಲಾಖೆಯ ವೆಬ್‌ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಂಡು, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಮೇಲು ರುಜು ಪಡೆದುಕೊಳ್ಳಬೇಕು.

(ಈ) ಸದರಿ ಬಿಲ್ಲನ್ನು, ಬ್ಯಾಂಕುವಾರು ವಿದ್ಯಾರ್ಥಿಗಳ, ಬ್ಯಾಂಕ್ ಅಕೌಂಟ್ ಮತ್ತು ಐ.ಎಫ್.ಎಸ್.ಸಿ ಕೋಡ್‌ನೊಂದಿಗೆ ಖಜಾನೆಗೆ (ಸಾಫ್ಟ್ ಪ್ರತಿಯೊಂದಿಗೆ) ಸಲ್ಲಿಸಿ, ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ನೇರವಾಗಿ **ಆನ್‌ಲೈನ್ ಮೂಲಕ** ಜಮಾ ಮಾಡಲು ಕ್ರಮ ತೆಗೆದುಕೊಳ್ಳಬೇಕು.

(ಉ) ಸೆಮಿಸ್ಟರ್ ಪದ್ಧತಿ ಇರುವ ಕೋರ್ಸುಗಳಿಗೆ ಸಂಬಂಧಪಟ್ಟಂತೆ, ಆ ಶೈಕ್ಷಣಿಕ ವರ್ಷದಲ್ಲಿ ಬರುವ ಸೆಮಿಸ್ಟರುಗಳು ಎಂದರ್ಥ.

VIII. ತಪ್ಪು ಮಾಹಿತಿಗೆ ದಂಡ:

1. ಅರ್ಜಿದಾರರು ಅಥವಾ ಶಿಕ್ಷಣ ಸಂಸ್ಥೆಯು, ತಪ್ಪು ಮಾಹಿತಿ ನೀಡಿದ್ದಲ್ಲಿ, ಅಂತಹವರ ವಿರುದ್ಧ ನಿಯಮಾನುಸಾರ ಈ ಕೆಳಗಿನಂತೆ ಕ್ರಮ ತೆಗೆದುಕೊಳ್ಳಲಾಗುವುದು.
2. ಭಾರತೀಯ ದಂಡ ಸಂಹಿತೆಯ ಕಲಂ 177 ಮತ್ತು 181ರ ಪ್ರಕಾರ, ಶಿಕ್ಷೆಗೆ ಗುರಿಪಡಿಸಲಾಗುತ್ತದೆ.
3. ಕಾನೂನಿನಂತೆ ಕ್ರಮ ಜರುಗಿಸುವುದರ ಜೊತೆಗೆ, ವಿದ್ಯಾರ್ಥಿಯು ಪಡೆದ ಒಟ್ಟು ಆರ್ಥಿಕ ಸಹಾಯವನ್ನು ಆ ವಿದ್ಯಾರ್ಥಿಯಿಂದ ಅಥವಾ ಅವರ ತಂದೆ–ತಾಯಿ / ಪೋಷಕರಿಂದ, ಭೂ ಕಂದಾಯ ಬಾಕಿಯೆಂದು ವಸೂಲಿ ಮಾಡಲಾಗುವುದು.

4. ಮಂಜೂರು ಮಾಡುವ ಅಧಿಕಾರಿಗಳು ಸಹ, ನಿಯಮಗಳ ವಿರುದ್ಧ ಮಂಜೂರು ಮಾಡಿ, ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದಲ್ಲಿ, ಅಂತಹವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವುದಲ್ಲದೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು ಹಾಗೂ ಈ ರೀತಿ ತಪ್ಪಾಗಿ ಪಾವತಿಯಾದ ಮೊತ್ತವನ್ನು ಅವರ ವೇತನದಿಂದ ವಸೂಲಿ ಮಾಡಲಾಗುವುದು.

IX. ಇತರೆ:

1. ಪ್ರವರ್ಗವಾರು ಜಾತಿಗಳ ಪಟ್ಟಿ, ಕುಟುಂಬದ ವಾರ್ಷಿಕ ವರಮಾನ, ಅರ್ಹತೆ, ಇತ್ಯಾದಿ, ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ಆದೇಶಗಳನ್ವಯ ಪರಿಷ್ಕರಣೆಗೆ ಒಳಪಟ್ಟಿರುತ್ತದೆ.
2. ಈ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಅರ್ಜಿ ನಮೂನೆ, ಕಾರ್ಯವಿಧಾನ, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ, ಇತ್ಯಾದಿಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತರು ನಿರ್ಧರಿಸುವುದು.

ಚಂದ್ರಶೇಖರ್,
ಸರ್ಕಾರದ ಅಧೀನ ಕಾರ್ಯದರ್ಶಿ–2,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಸರ್ಕಾರದ ಆದೇಶ ಸಂ.ಹಿಂವಕ 518 ಬಿಎಂಎಸ್ 2013 ಬೆಂಗಳೂರು, ದಿನಾಂಕ: 03–09–2013ಕ್ಕೆ ಅನುಬಂಧ–2

ಗುಂಪುವಾರು ಕೋರ್ಸುಗಳ ವಿವರಗಳು

Group- 'A'	(i)Degree and Post Graduate level courses including M.Phil., P.hd., and Post Doctoral research in Medicine (Allopathic, Indian and other recognized systems of medicines), Engineering, Technology, Planning, Architecture, Design, Fashion Technology, Agriculture, Veterinary & Allied Sciences, Management, Business Finance / Administration, Computer Science / Applications.
	(ii)Post Graduate Diploma courses in various branches of management & medicine.
	(iii)C.A/I.C.W.A/C.S./I.C.F.A etc.,
	(iv)M.Phil., Ph.D. and Post Doctoral Programmes (D.Litt., D.Sc., etc.)
	(ii)L.L.M
Group- 'B'	(i)Graduate/Post graduate courses leading to Degree, Diploma, Certificate in areas like Pharmacy (B.Pharma.,), Nursing (B Nursing), LLB, BFS, other paramedical branches like rehabilitation, diagnostics etc., Mass Communication, Hotel Management & Catering, Travel/ Tourism/ Hospitality Management, Interior Decoration, Nutrition & Dietetics, Commercial Art, Financial Services (e.g. Banking, Insurance, Taxation etc.) for which entrance qualification is minimum Sr. Secondary (10+2)
	(ii)Post Graduate courses not covered under Group A e.g. MA/Msc.,/M.com/M.Ed.,/M.Pharma., etc.,
Group- 'C'	All other courses leading to a graduate degree not covered under Group A & B.e.g. BA/B.Sc.,/B.Com etc.,
Group- 'D'	All post-matriculation level non degree courses for which entrance qualification is High School (Class X), both general and vocational stream, ITI courses, 3 year diploma courses in Polytechnics, etc.,

ಚಂದ್ರಶೇಖರ್,
ಸರ್ಕಾರದ ಅಧೀನ ಕಾರ್ಯದರ್ಶಿ–2,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

P.R. 942
SC- 250

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಕೋಲಾರ ಜಿಲ್ಲೆ, ಮುಳಬಾಗಿಲು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ ಸರ್ಕಾರದ ಅಂತಿಮ ಅನುಮೋದನೆ ನೀಡುವ ಸಂಬಂಧ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ : ನಅಇ/78/ಬೆಂರೂಪ್ರಾ/2009, ದಿನಾಂಕ : 16–06–2009.
2. ಮುಖ್ಯಾಧಿಕಾರಿಗಳು ಹಾಗೂ ಸದಸ್ಯ ಕಾರ್ಯದರ್ಶಿಗಳು, ಪುರಸಭಾ ಯೋಜನಾ ಪ್ರಾಧಿಕಾರದ ಪತ್ರ ಸಂಖ್ಯೆ: ಮುಪುಯೋ/ಮಯೋಪ್ರ/01/2010–11, ದಿನಾಂಕ : 17–02–2011.
3. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿಯ ಏಕ ಕಡತ ಸಂಖ್ಯೆ: ನಗ್ರಾಯೋ(22)/ ಉನಿ(ಯೋವಿ) /ಮುಳಬಾಗಿಲು/ಮ.ಯೋ/896/2010–11, ದಿನಾಂಕ : 20–10–2012 ರಲ್ಲಿ ನೀಡಿರುವ ಅಭಿಪ್ರಾಯ.

ಪ್ರಸ್ತಾವನೆ :

ಮೇಲೆ ಓದಲಾದ (1) ಸರ್ಕಾರಿ ಆದೇಶದಲ್ಲಿ ಮುಳಬಾಗಿಲು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ತಾತ್ಕಾಲಿಕ ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಮುಳಬಾಗಿಲು ಪುರಸಭೆ ಯೋಜನಾ ಪ್ರಾಧಿಕಾರವು ಮುಳಬಾಗಿಲು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆ ಕುರಿತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(1) ರನ್ವಯ ಅಗತ್ಯ ಕ್ರಮ ಜರುಗಿಸಿ ಮಹಾ ಯೋಜನೆಯ ನಕ್ಷೆಗಳನ್ನು ಹಾಗೂ ವರದಿಯನ್ನು ತಯಾರಿಸಿ ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (3)ರ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿಯ ಏಕ ಕಡತದಲ್ಲಿ ಮುಳಬಾಗಿಲು ಪಟ್ಟಣದ ಜನಸಂಖ್ಯೆಯು 2021 ರಲ್ಲಿ 75,000 ಗಳಷ್ಟು ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾಯೋಜನೆಯನ್ನು ತಯಾರಿಸಲಾಗಿದೆ. ಮುಳಬಾಗಿಲು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ 850.00 ಹೆಕ್ಟೇರ್ ಪ್ರದೇಶದಲ್ಲಿ 750.00 ಹೆಕ್ಟೇರ್ ಪ್ರದೇಶವನ್ನು ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ ಯೋಜನೆಯನ್ನು ರೂಪಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 12 ರಲ್ಲಿನ ಅಂಶಗಳನ್ನು ಪರಿಗಣಿಸಿ, ಪಟ್ಟಣದ ಮುಂದಿನ ಯೋಜಿತ ಬೆಳವಣಿಗೆಗಳಿಗಾಗಿ ಪ್ರಸ್ತಾಪಿಸಿರುವ 750.00 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 418.52 ಹೆಕ್ಟೇರ್ (ಶೇ. 55.80), ವಾಣಿಜ್ಯಕ್ಕಾಗಿ 36.17 ಹೆಕ್ಟೇರ್ (ಶೇ. 4.80), ಕೈಗಾರಿಕೆಗಾಗಿ 32.68 ಹೆಕ್ಟೇರ್ (ಶೆ. 4.35), ಸಾರ್ವಜನಿಕ/ಅರೆ ಸಾರ್ವಜನಿಕ ಉಪಯೋಗಕ್ಕೆ 45.34 ಹೆಕ್ಟೇರ್ (ಶೇ. 6.05), ಉದ್ಯಾನವನ/ಬಯಲು ಜಾಗೆಗಳಿಗೆ 80.80 ಹೆಕ್ಟೇರ್ (ಶೇ. 10.78), ಸಾರ್ವಜನಿಕ ಉಪಯುಕ್ತತೆಗಾಗಿ 0.66 ಹೆಕ್ಟೇರ್ (ಶೇ. 0.08) ಹಾಗೂ ಸಾರಿಗೆ/ಸಂಪರ್ಕ ವಲಯಕ್ಕೆ 135.83 ಹೆಕ್ಟೇರ್ (ಶೇ 18.14) ಪ್ರದೇಶವನ್ನು ನಿಗಧಿಪಡಿಸಲಾಗಿದೆ ಮಹಾ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದ್ದು ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ 1961ರ ಕಲಂ 13(3)ರನ್ವಯ ಅಂತಿಮ ಅನುಮೋದನೆ ನೀಡಲು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 221 ಬೆಂರೂಪ್ರಾ 2012, ಬೆಂಗಳೂರು, ದಿನಾಂಕ : 14–12–2012.

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮುಳಬಾಗಿಲು ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3) ರನ್ವಯ ಅಂತಿಮ ಅನುಮೋದನೆಯನ್ನು ನೀಡಲಾಗಿದೆ. ಮಹಾಯೋಜನೆಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎಂ. ವಾಸುದೇವ ರಾವ್

ಸರ್ಕಾರದ ಅಧೀನ ಕಾರ್ಯದರ್ಶಿ,

ನಗರಾಭಿವೃದ್ಧಿ ಇಲಾಖೆ

P.R. 880

SC-10

ನಗರಾಭಿವೃದ್ಧಿ ಸಚಿವಾಲಯ

ವಿಷಯ : ದಾವಣಗೆರೆ ಜಿಲ್ಲೆ, ಹರಪನಹಳ್ಳಿ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪರಿಷ್ಕೃತ) ಸರ್ಕಾರದ ಅಂತಿಮ ಅನುಮೋದನೆ ನೀಡುವ ಕುರಿತು

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ : ನಅಇ 48 ಬೆಂರೂಪ್ರಾ 2009, ದಿನಾಂಕ : 01–06–2009.
2. ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ದಾವಣಗೆರೆ ಇವರ ಪತ್ರ ಸಂಖ್ಯೆ : ನಗ್ರಾಯೋದಾ/ಹ.ಹಳ್ಳಿ/ಸ್ಥ.ಯೋ.ಪ್ರ/ಮ.ಯೋ (ಅಂ)/2011–12/322, ದಿನಾಂಕ : 26–10–2011 ಹಾಗೂ ದಿನಾಂಕ : 4–7–2012.
3. ನಿರ್ದೇಶಕರು, ನಗರ ಯೋಜನಾ ಇಲಾಖೆ ಇವರ ಏಕ ಕಡತ ಸಂಖ್ಯೆ : ನಯೋ(13)/ಜಂನಿ(ಕೇ.ಕಾ)/ಮ.ಯೋ(ಪರಿಷ್ಕೃತ) ಅಂತಿಮ/75/2011–12, ದಿನಾಂಕ : 23–11–2011.

ಪ್ರಸ್ತಾವನೆ :

ಮೇಲೆ ಕ್ರ. ಸಂ. (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ದಾವಣಗೆರೆ ಜಿಲ್ಲೆ ಹರಪನಹಳ್ಳಿ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪರಿಷ್ಕೃತ) ಸರ್ಕಾರದ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

ಮೇಲೆ ಕ್ರ. ಸಂ. (2)ರಲ್ಲಿ ಓದಲಾದ ಪತ್ರದಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ದಾವಣಗೆರೆ ಇವರು ಹರಪನಹಳ್ಳಿ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ (ಪರಿಷ್ಕೃತ) ನಕ್ಷೆ ಹಾಗೂ ವರದಿಯನ್ನು ತಯಾರಿಸಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಶಿಫಾರಸ್ಸಿನೊಂದಿಗೆ ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿರುತ್ತಾರೆ.

ಮೇಲೆ ಕ್ರ.ಸಂ. (3)ರಲ್ಲಿ ಓದಲಾದ ನಗರ ಯೋಜನಾ ನಿರ್ದೇಶಕರ ಕಛೇರಿಯ ಏಕ ಕಡತದಲ್ಲಿ ಹರಪನಹಳ್ಳಿ ಪಟ್ಟಣದ ಜನಸಂಖ್ಯೆಯು 2021 ರಲ್ಲಿ 85,000 ಗಳಷ್ಟು ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾ ಯೋಜನೆ (ಪರಿಷ್ಕೃತ) ಯನ್ನು ತಯಾರಿಸಲಾಗಿದೆ. ಹರಪನಹಳ್ಳಿ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ 1575.00 ಹೆಕ್ಟೇರ್ ವಿಸ್ತೀರ್ಣದಲ್ಲಿ 699.75 ಹೆಕ್ಟೇರ್ ಪ್ರದೇಶವನ್ನು ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ ಮಹಾ ಯೋಜನೆ (ಪರಿಷ್ಕೃತ) ಯನ್ನು ರೂಪಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 12 ರಲ್ಲಿನ ಅಂಶಗಳನ್ನು ಪರಿಗಣಿಸಿ, ಹರಪನಹಳ್ಳಿ ಪಟ್ಟಣದ ಮುಂದಿನ ಯೋಜಿತ ಬೆಳವಣಿಗೆಗಳಿಗಾಗಿ ಪ್ರಸ್ತಾಪಿಸಿರುವ ಪ್ರದೇಶದಲ್ಲಿ ವಸತಿಗಾಗಿ 338.26 ಹೆಕ್ಟೇರ್ (ಶೇ 48.34), ವಾಣಿಜ್ಯಕ್ಕಾಗಿ

21.63 ಹೆಕ್ಟೇರ್ (ಶೇ. 3.09), ಕೈಗಾರಿಕೆಗಾಗಿ 19.61 ಹೆಕ್ಟೇರ್ (ಶೇ. 2.80), ಸಾರ್ವಜನಿಕ/ಅರೆ ಸಾರ್ವಜನಿಕ ಉಪಯೋಗಕ್ಕೆ 58.56 ಹೆಕ್ಟೇರ್ (ಶೇ 8.38) ಉದ್ಯಾನವನ/ ಬಯಲು ಜಾಗಗಳಿಗೆ 64.12 ಹೆಕ್ಟೇರ್ (ಶೇ. 9.16) ಹಾಗೂ ಸಾರಿಗೆ ಸಂಪರ್ಕ ವಲಯಕ್ಕಾಗಿ 196.15 ಹೆಕ್ಟೇರ್ (ಶೇ. 28.03) ಮತ್ತು ಜಲಾವೃತ್ತ ಪ್ರದೇಶವಾಗಿ 1.42 ಹೆಕ್ಟೇರ್ (ಶೇ. 0.20), ಪ್ರದೇಶವನ್ನು ನಿಗಧಿಪಡಿಸಲಾಗಿದೆ. ಮಹಾಯೋಜನೆಯನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದ್ದು ಸದರಿ ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3)ರನ್ವಯ ಅಂತಿಮ ಅನುಮೋದನೆ ನೀಡುವಂತೆ ನಗರ ಯೋಜನಾ ನಿರ್ದೇಶಕರು, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 249 ಬೆಂರೂಪ್ರಾ 2011, ಬೆಂಗಳೂರು, ದಿನಾಂಕ : 19–10–2012.

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆ–ಹರಪನಹಳ್ಳಿ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ (ಪರಿಷ್ಕೃತ) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3) ರನ್ವಯ ಸರ್ಕಾರದ ಅಂತಿಮ ಅನುಮೋದನೆಯನ್ನು ನೀಡಲಾಗಿದೆ.

ಮಹಾಯೋಜನೆಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎಂ. ವಾಸುದೇವ ರಾವ್

P.R. 881 ಸರ್ಕಾರದ ಅಧೀನ ಕಾರ್ಯದರ್ಶಿ,

SC-100 ನಗರಾಭಿವೃದ್ಧಿ ಇಲಾಖೆ

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ–ಭದ್ರಾವತಿ ನಗರಗಳ ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆಗೆ (ಪರಿಷ್ಕೃತ–II) ಸರ್ಕಾರದ ಅಂತಿಮ ಅನುಮೋದನೆಯನ್ನು ನೀಡುವ ಕುರಿತು.

ಓದಲಾಗಿದೆ :

1. ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 20 ಬೆಂರೂಪ್ರಾ 2009, ದಿನಾಂಕ : 22–05–2010
2. ಸರ್ಕಾರದ ಆದೇಶ ಸಂಖ್ಯೆ : ನಅಇ/194/ಬೆಂರೂಪ್ರಾ/2011, ದಿನಾಂಕ : 29–10–2011.
3. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗ ಇವರ ಪತ್ರ ಸಂಖ್ಯೆ : ಶಿನಪ್ರಾ/ನಯೋ/ಮ.ಯೋ (ಪ– II ಅಂತಿಮ)/2010–11.392, ದಿನಾಂಕ : 20–07–2012.
4. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿಯ ಏಕ ಕಡತ ಸಂಖ್ಯೆ : ನಗ್ರಾಯೋ(14)/ ಉನಿ(ವಿ.ವಿ)/ಮ.ಯೋ(ಪ–II)ಅಂತಿಮ/ ಶಿವಮೊಗ್ಗ: 2012–13, ದಿನಾಂಕ : 30–07–2012.

ಪ್ರಸ್ತಾವನೆ :

ಮೇಲೆ ಓದಲಾದ (2)ರ ಸರ್ಕಾರಿ ಆದೇಶದಲ್ಲಿ ಶಿವಮೊಗ್ಗ–ಭದ್ರಾವತಿ ನಗರಗಳ ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆಗೆ (ಪ– II) ತಾತ್ಕಾಲಿಕ ಅನುಮೋದನೆ ನೀಡಲಾಗಿದೆ.

ಮೇಲೆ ಕ್ರ. ಸಂ. (3)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗ, ಇವರ ಶಿವಮೊಗ್ಗ–ಭದ್ರಾವತಿ ನಗರಗಳ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ (ಪರಿಷ್ಕೃತ– II)ಯ ನಕ್ಷೆ ಹಾಗೂ ವರದಿಯನ್ನು ತಯಾರಿಸಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಶಿಫಾರಸ್ಸಿನೊಂದಿಗೆ ಸರ್ಕಾರದ ಅಂತಿಮ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಕ್ರ.ಸಂ. (4)ರಲ್ಲಿ ಓದಲಾದ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿಯ ಏಕ ಕಡತದಲ್ಲಿ ಏಕ ಕಡತದಲ್ಲಿ ಶಿವಮೊಗ್ಗ ನಗರದ ಜನಸಂಖ್ಯೆಯು 2031ಕ್ಕೆ 7,50,000 ಗಳಿಗೆ ಮತ್ತು ಭದ್ರಾವತಿ ನಗರದ ಜನಸಂಖ್ಯೆಯು 2013ಕ್ಕೆ 2,70,000 ಗಳಿಗೆ ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾ ಯೋಜನೆ (ಪರಿಷ್ಕೃತ– II) ತಯಾರಿಸಲಾಗಿದೆ. ಶಿವಮೊಗ್ಗ–ಭದ್ರಾವತಿ ನಗರಗಳ ಸ್ಥಳೀಯ ಯೋಜನಾ ಪ್ರದೇಶದ 417.28 ಚ.ಕಿ.ಮೀ. ವಿಸ್ತೀರ್ಣದಲ್ಲಿ ಶಿವಮೊಗ್ಗ ನಗರಕ್ಕೆ ಸಂಬಂಧಿಸಿದಂತೆ 10437.44 ಹೆಕ್ಟೇರ್ ಪ್ರದೇಶವನ್ನು ನಗರೀಕರಣದ ಎಲ್ಲೆಯೆಂದು ಮತ್ತು ಭದ್ರಾವತಿ ನಗರಕ್ಕೆ 4125.53 ಹೆಕ್ಟೇರ್ ಪ್ರದೇಶವನ್ನು ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ ಮಹಾ ಯೋಜನೆ (ಪರಿಷ್ಕೃತ– II) ಯನ್ನು ರೂಪಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 12 ರಲ್ಲಿನ ಅಂಶಗಳನ್ನು ಪರಿಗಣಿಸಿ, ಶಿವಮೊಗ್ಗ ನಗರದ ಮುಂದಿನ ಯೋಜಿತ ಬೆಳವಣಿಗೆಗಳಿಗಾಗಿ ಪ್ರಸ್ತಾಪಿಸಿರುವ ಪ್ರದೇಶದಲ್ಲಿ ವಸತಿಗಾಗಿ 5147.80 ಹೆಕ್ಟೇರ್ (ಶೇ 52.81), ವಾಣಿಜ್ಯಕ್ಕಾಗಿ 443.26 ಹೆಕ್ಟೇರ್ (ಶೇ. 4.55), ಕೈಗಾರಿಕೆಗಾಗಿ 547.14 ಹೆಕ್ಟೇರ್ (ಶೇ. 5.61), ಸಾರ್ವಜನಿಕ/ಅರೆ ಸಾರ್ವಜನಿಕ ಉಪಯೋಗಕ್ಕೆ 811.49 ಹೆಕ್ಟೇರ್ (ಶೇ 8.32) ಉದ್ಯಾನವನ/ ಬಯಲು ಜಾಗಗಳಿಗೆ 1094.77 ಹೆಕ್ಟೇರ್ (ಶೇ. 11.23) ಸಾರ್ವಜನಿಕ ಉಪಯುಕ್ತತೆಗಾಗಿ 73.81 ಹೆಕ್ಟೇರ್ (ಶೇ. 0.76) ಹಾಗೂ ಸಾರಿಗೆ/ಸಂಪರ್ಕ ವಲಯಕ್ಕೆ 1628.52 ಹೆಕ್ಟೇರ್ (ಶೇ. 16.72), ಜಲಾವೃತ್ತ ಪ್ರದೇಶವಾಗಿ 690.65 ಹೆಕ್ಟೇರ್ ಒಟ್ಟು 10437.44 ಹೆಕ್ಟೇರ್‌ಗಳು ನಗರೀಕರಣದ ಎಲ್ಲೆಯೆಂದು ನಿಗಧಿಪಡಿಸಲಾಗಿದೆ.

ಭದ್ರಾವತಿ ನಗರದ ಯೋಜಿತ ಬೆಳವಣಿಗೆಗಳಿಗಾಗಿ ಪ್ರಸ್ತಾಪಿಸಿರುವ ಪ್ರದೇಶದಲ್ಲಿ ವಸತಿಗಾಗಿ 1894.77 ಹೆಕ್ಟೇರ್ (ಶೇ. 48.79), ವಾಣಿಜ್ಯಕ್ಕಾಗಿ 140.75 ಹೆಕ್ಟೇರ್ (ಶೇ. 3.62), ಕೈಗಾರಿಕೆಗಾಗಿ 477.25 ಹೆಕ್ಟೇರ್ (ಶೇ. 12.29) ಸಾರ್ವಜನಿಕ/ಅರೆ ಸಾರ್ವಜನಿಕ ಉಪಯೋಗಕ್ಕೆ 243.32 ಹೆಕ್ಟೇರ್ (ಶೇ. 6.27), ಉದ್ಯಾನವನ/ಬಯಲು ಜಾಗಗಳಿಗೆ 527.90 ಹೆಕ್ಟೇರ್ (ಶೇ. 13.59), ಸಾರ್ವಜನಿಕ ಉಪಯುಕ್ತತೆಗಾಗಿ 22.06 ಹೆಕ್ಟೇರ್ (ಶೇ. 0.57) ಹಾಗೂ

ಸಾರಿಗೆ/ಸಂಪರ್ಕ ವಲಯಕ್ಕೆ 577.70 ಹೆಕ್ಟೇರ್ (ಶೇ. 14.87), ಕಾಯ್ದಿರಿಸಿದ್ದು ಜಲಾವೃತ್ತ ಪ್ರದೇಶವಾಗಿ 241.78 ಹೆಕ್ಟೇರ್ ಒಳಗೊಂಡಂತೆ ಒಟ್ಟು 4125.53 ಹೆಕ್ಟೇರ್‌ಗಳು ನಗರೀಕರಣದ ಎಲ್ಲೆಯೆಂದು ನಿಗಧಿಪಡಿಸಲಾಗಿದೆ.

ಮಹಾಯೋಜನೆ (ಪರಿಷ್ಕೃತ– II) ಯನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ಭೂ ಉಪಯೋಗ ವಲಯ ಮತ್ತು ನಿಯಮಾವಳಿಗಳನ್ನು ರೂಪಿಸಲಾಗಿದೆ. ಸದರಿ ಮಹಾಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ 1961ರ ಕಲಂ 13(3)ರನ್ವಯ ಅಂತಿಮ ಅನುಮೋದನೆ ನೀಡುವಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ನಅಇ 159 ಬೆಂರೂಪ್ರಾ 2012, ಬೆಂಗಳೂರು, ದಿನಾಂಕ : 27–08–2012.

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶಿವಮೊಗ್ಗ–ಭದ್ರಾವತಿ ನಗರಗಳ ಪರಿಷ್ಕೃತ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾಯೋಜನೆ–20131 (ಪರಿಷ್ಕೃತ– II)ಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3) ರನ್ವಯ ಅಂತಿಮ ಅನುಮೋದನೆಯನ್ನು ನೀಡಲಾಗಿದೆ. ಮಹಾ ಯೋಜನೆ–2031 (ಪ– II) ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಟಿ.ಎಂ. ವಾಸುದೇವ ರಾವ್

PR. 882

ಸರ್ಕಾರದ ಅಧೀನ ಕಾರ್ಯದರ್ಶಿ,

SC-100

ನಗರಾಭಿವೃದ್ಧಿ ಇಲಾಖೆ

ಆರ್ಥಿಕ ಸಚಿವಾಲಯ

ಸೇರ್ಪಡೆ

ಸಂಖ್ಯೆ : ಆಇ 12 ಎಸ್‌ಆರ್‌ಪಿ 2012 (III), ಬೆಂಗಳೂರು, ದಿನಾಂಕ : 05–09–2013.

ವಿಷಯ : ಸಮವಸ್ತ್ರ ನಿರ್ವಹಣೆ ಭತ್ಯೆ–ದರಗಳ ಪರಿಷ್ಕರಣೆ ಕುರಿತು

ಸರ್ಕಾರಿ ಆದೇಶ ಸಂಖ್ಯೆ : ಆಇ 12 ಎಸ್‌ಆರ್‌ಪಿ 2012 (III) ದಿನಾಂಕ : 14–06–2012ರ ಆದೇಶ ಭಾಗದ "ಇಲಾಖೆ ಮತ್ತು ಹುದ್ದೆ"– ಶೀರ್ಷಿಕೆಯಡಿ "ರಾಜ್ಯ ಶಿಷ್ಠಾಚಾರ ಹಾಗೂ ಅತಿಥಿ ಗೃಹಗಳು–ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಶಿಷ್ಠಾಚಾರ)"ಯ ಹುದ್ದೆಗಳಿಗೆ ಕಲಂ–2ರಲ್ಲಿ "ಪರಿಷ್ಕೃತ ದರ"ಗಳನ್ನು ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು.

ಇಲಾಖೆ ಮತ್ತು ಹುದ್ದೆ	ಪರಿಷ್ಕೃತ ದರ
1	2
ರಾಜ್ಯ ಶಿಷ್ಠಾಚಾರ ಹಾಗೂ ಅತಿಥಿ ಗೃಹಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಶಿಷ್ಠಾಚಾರ)	
(1) ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿ (ಶಿಷ್ಠಾಚಾರ)	2 ವರ್ಷಕ್ಕೊಮ್ಮೆ ರೂ. 12,000/–
(2) ಡಿ ಗುಂಪಿನ ನೌಕರರು (ವಿಮಾನ ನಿಲ್ದಾಣ)	ವಾರ್ಷಿಕ ರೂ. 2000/–
(3) ವಿಶೇಷ ಅಧಿಕಾರಿ–ಕುಮಾರ ಕೃಪ ಅತಿಥಿ ಗೃಹ	2 ವರ್ಷಕ್ಕೊಮ್ಮೆ ರೂ. 12,000/–

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

PR. 895

ಸುಂದರ ರಾಜ ಗುಪ್ತ

SC-100

ಸರ್ಕಾರದ ಜಂಟಿ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಸೇವೆಗಳು–2).

ಆರ್ಥಿಕ ಸಚಿವಾಲಯ

ಸೇರ್ಪಡೆ

ಸಂಖ್ಯೆ : ಆಇ 05 ಎಸ್‌ಆರ್‌ಪಿ 2013, ಬೆಂಗಳೂರು, ದಿನಾಂಕ : 06–09–2013.

ದಿನಾಂಕ : 10–05–2013ರ ಸರ್ಕಾರಿ ಆದೇಶ ಸಂಖ್ಯೆ : ಆಇ 05 ಎಸ್‌ಆರ್‌ಪಿ 2013ರ ಕಂಡಿಕೆ (3) ರಡಿಯಲ್ಲಿರುವ (iii)ರಲ್ಲಿನ ಕಾಲೇಜುಗಳ ಬೋಧಕ ಸಿಬ್ಬಂದಿಗಳಿಗೆ ಪದಗಳ ನಂತರ **"ಎನ್‌ಜೆಪಿಸಿ ವೇತನ ಶ್ರೇಣಿಯಲ್ಲಿರವ ನ್ಯಾಯಾಂಗ ಅಧಿಕಾರಿಗಳಿಗೆ"** ಎಂಬ ಪದಗಳನ್ನು ಸೇರಿಸಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸುಂದರ ರಾಜ ಗುಪ್ತ

ಸರ್ಕಾರದ ಜಂಟಿ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಸೇವೆಗಳು–2).

FINANCE SECRETARIAT

ADDENDUM

NO. FD 05 SRP 2013, BANGALORE, DATED : 06-09-2013.

At the end of para 3 of Government Order No. FD 05 SRP 2013, dated : 10-05-2013, the words **"and to the Judicial Officers on NJPC scales of Pay"** shall be inserted.

By Order and in the name of the Governor of Karnataka,

SUNDARA RAJA GUPTHA

Joint Secretary to Government,

Finance Department (Services-2).

P.R. 896

SC-100

FINANCE SECRETARIAT

SUB : Re-classification of places and revision of the rate of House Rent Allowance in respect of State Government employees-reg.

READ :

1. G.O. No. FD 7 SRP 2012, dated : 21-04-2012..
2. G.O. No. FD 18 SRP 2012, dated : 19-10-2012.
3. G.O. No. FD 9 SRP 2013, dated : 18-03-2013.
4. G.O. No. FD 5 SRP 2013, dated : 10-05-2013..

PREAMBLE :

On the basis of the recommendations of the Official Pay Committee 2011, the Cities/Towns, and other Places in the State were classified into four classes for the purpose of House Rent Allowance with reference to their population based on 2001 Census figures vide G.O. Dated : 21-04-2012 read at (1) above. The list of places falling under each of the four classifications was published in the Annexure appended to G.O. dated : 19-10-2012 read at (2) above.

The Hon'ble Chief Minister in the Budget Speech 2013-14 has announced the Government's decision to re-classify the Urban and Rural areas in the State as A, B & C categories for the purpose of House Rent Allowance and to revise the rate of House Rent Allowance. Accordingly, the following orders are issued.

GOVERNMENT ORDER NO. FD 14 SRP 2013, BANGALORE, DATED 02-09-2013.

In parual modification of the G.O. No. FD 18 SRP 2012, dated : 19-10-2012, Government are pleased to revise the classification of Cities/Town and Other Places in the State the purpose HRA into three categories as under and the revised rates of HRA shall be as indicated against them.

Population	Classification	Rate of HRA as % of basic
25 lakh and above	A	30%
5 lakh and above but less than 25 lakh	B	20%
Less than 5 lakh	C	10%

2. The details of the places falling under each of the above three classifications are as under :-

"A" Class City

Bruhath Bangalore Mahanagara Palike

(Places situated within the BBMP limits as notified in Notification No. UDD 92 MNY 2006, dated : 16-01-2007)

"B" Class Cities

Mysore Municipal Corporation

Hubli-Dharwad Municipal Corporation

"C" Class Cities

All other places with a population of less than 5 lakh

3. The classification of Cities/Towns and other places in the State shall continue to be on the basis of 2001 Census figures until further orders.

4. All other conditions stipulated in G.O. No. FD 18 SRP 2012, dated : 19-10-2012 for grant of House Rent Allowance shall continue to apply.

5. These orders shall come into effect from 1st October 2013.

By Order and in the name of the Governor of Karnataka,

SUNDARA RAJA GUPTHA

Joint Secretary to Government,

Finance Department (Services-2).

ಆರ್ಥಿಕ ಸಚಿವಾಲಯ

ವಿಷಯ : ರಾಜ್ಯದಲ್ಲಿನ ಪ್ರದೇಶಗಳ ಮರು ವರ್ಗೀಕರಣ ಮತ್ತು ರಾಜ್ಯ ಸರ್ಕಾರಿ ನೌಕರರ ಮನೆ ಬಾಡಿಗೆ ಭತ್ಯೆ ದರಗಳ ಪರಿಷ್ಕರಣೆ ಕುರಿತು.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ : ಆಇ 7 ಎಸ್‌ಆರ್‌ಪಿ 2012, ದಿನಾಂಕ : 21–04–2012
2. ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 18 ಎಸ್‌ಆರ್‌ಪಿ 2012, ದಿನಾಂಕ : 19–10–2012
3. ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 09 ಎಸ್‌ಆರ್‌ಪಿ 2013, ದಿನಾಂಕ : 18–03–2013
4. ಸರ್ಕಾರಿ ಆದೇಶ ಸಂಖ್ಯೆ : ಆಇ 5 ಎಸ್‌ಆರ್‌ಪಿ 2013, ದಿನಾಂಕ : 10–05–2013.

ಪ್ರಸ್ತಾವನೆ :

2011ರ ಅಧಿಕಾರಿ ವೇತನ ಸಮಿತಿಯ ಶಿಫಾರಸ್ಸುಗಳ ಆಧಾರದನ್ವಯ, ಈ ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 21–04–2012ರ ಸರ್ಕಾರಿ ಆದೇಶದಲ್ಲಿ ಮನೆ ಬಾಡಿಗೆ ಭತ್ಯೆಯ ಉದ್ದೇಶಕ್ಕಾಗಿ ರಾಜ್ಯದಲ್ಲಿನ ನಗರಗಳು/ಪಟ್ಟಣಗಳು ಮತ್ತು ಇತರೆ ಪ್ರದೇಶಗಳನ್ನು 2001ರ ಜನಗಣತಿಯ ಅಂಕಿ ಅಂಶಗಳ ಆಧಾರದ ಮೇಲೆ ನಾಲ್ಕು ವರ್ಗಗಳಾಗಿ ವರ್ಗೀಕರಿಸಲಾಗಿರುತ್ತದೆ. ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ದಿನಾಂಕ : 19–10–2012ರ ಸರ್ಕಾರಿ ಆದೇಶದೊಂದಿಗೆ ಲಗತ್ತಿಸಲಾದ ಅನುಬಂಧದಲ್ಲಿ ನಾಲ್ಕು ವರ್ಗಗಳಲ್ಲಿನ ಪ್ರದೇಶಗಳ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ಮಾನ್ಯ ಮುಖ್ಯಮಂತ್ರಿಗಳು 2013–14ರ ಆಯವ್ಯಯ ಭಾಷಣದಲ್ಲಿ, ಮನೆ ಬಾಡಿಗೆ ಭತ್ಯೆಯ ಉದ್ದೇಶಕ್ಕಾಗಿ ರಾಜ್ಯದಲ್ಲಿನ ನಗರ ಹಾಗೂ ಗ್ರಾಮೀಣ ಪ್ರದೇಶಗಳನ್ನು ಎ, ಬಿ ಮತ್ತು ಸಿ ದರ್ಜೆಗಳಾಗಿ ಪುನರ್ ವರ್ಗೀಕರಿಸಿ, ಮನೆ ಬಾಡಿಗೆ ಭತ್ಯೆ ದರಗಳನ್ನು ಪರಿಷ್ಕರಿಸುವ ಸರ್ಕಾರದ ನಿರ್ಧಾರವನ್ನು ಘೋಷಿಸಿರುತ್ತಾರೆ. ಅದರಂತೆ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 14 ಎಸ್‌ಆರ್‌ಪಿ 2013, ಬೆಂಗಳೂರು, ದಿನಾಂಕ : 02–09–2013

ದಿನಾಂಕ : 19–10–2012ರ ಸರ್ಕಾರಿ ಆದೇಶ ಸಂಖ್ಯೆ ಆಇ 18 ಎಸ್‌ಆರ್‌ಪಿ 2012ನ್ನು ಭಾಗಶಃ ಮಾರ್ಪಡಿಸಿ ಮನೆ ಬಾಡಿಗೆ ಭತ್ಯೆಯ ಉದ್ದೇಶಕ್ಕಾಗಿ, ರಾಜ್ಯದಲ್ಲಿನ ನಗರಗಳು/ಪಟ್ಟಣಗಳು ಮತ್ತು ಇತರೆ ಪ್ರದೇಶಗಳನ್ನು ಈ ಕೆಳಗಿನಂತೆ ಮೂರು ಪ್ರವರ್ಗಗಳಾಗಿ ಪುನರ್ ವರ್ಗೀಕರಿಸಲು ಸರ್ಕಾರವು ಹರ್ಷಿಸುತ್ತದೆ ಮತ್ತು ಪರಿಷ್ಕೃತ ಮನೆ ಬಾಡಿಗೆ ಭತ್ಯೆ ದರಗಳು ಅವುಗಳ ಮುಂದೆ ಸೂಚಿಸಿದಂತಿರತಕ್ಕದ್ದು.

ಜನಸಂಖ್ಯೆ	ವರ್ಗೀಕರಣ	ಮನೆ ಬಾಡಿಗೆ ಭತ್ಯೆಯ ದರ ಮೂಲ ವೇತನದ ಶೇಕಡ
25 ಲಕ್ಷ ಮತ್ತು ಅದಕ್ಕೂ ಹೆಚ್ಚು	ಎ	ಮೂಲ ವೇತನದ ಶೇಕಡ 30 ರಷ್ಟು
5 ಲಕ್ಷದಿಂದ 25 ಲಕ್ಷದವರೆಗೆ	ಬಿ	ಮೂಲ ವೇತನದ ಶೇಕಡ 20 ರಷ್ಟು
5 ಲಕ್ಷಕ್ಕಿಂತ ಕಡಿಮೆ	ಸಿ	ಮೂಲ ವೇತನದ ಶೇಕಡ 10 ರಷ್ಟು

2. ಈ ಮೇಲೆ ತಿಳಿಸಿರುವ ಮೂರು ವರ್ಗಗಳಡಿ ಬರುವ ಸ್ಥಳಗಳ ವಿವರಗಳು ಈ ಕೆಳಕಂಡಂತಿರುತ್ತದೆ.

"ಎ" ವರ್ಗದ ನಗರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(ದಿನಾಂಕ : 16–01–2007ರ ಸರ್ಕಾರಿ ಅಧಿಸೂಚನೆ ಸಂಖ್ಯೆ : ಯುಡಿಡಿ 92 ಎಂಎನ್‌ವೈ 2006ರಲ್ಲಿ ಅಧಿಸೂಚಿಸಿರುವ ಗಡಿ ಪ್ರದೇಶಗಳ ವ್ಯಾಪ್ತಿಯೊಳಗಿರುವ ಬಿಬಿಎಂಪಿ ಪ್ರದೇಶ)

"ಬಿ" ವರ್ಗದ ನಗರಗಳು

ಮೈಸೂರು ಮಹಾನಗರ ಪಾಲಿಕೆ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

"ಸಿ" ವರ್ಗದ ನಗರಗಳು

5 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಇತರೆ ಎಲ್ಲಾ ಪ್ರದೇಶಗಳು

3. ರಾಜ್ಯದಲ್ಲಿನ ನಗರಗಳು/ಪಟ್ಟಣಗಳು ಮತ್ತು ಇತರೆ ಪ್ರದೇಶಗಳ ವರ್ಗೀಕರಣವು ಈ ಹಿಂದಿನಂತೆ, 2001ರ ಜನಗಣತಿಯ ಆಧಾರದ ಮೇಲೆ ಮುಂದುವರೆಯತಕ್ಕದ್ದು.

4. ದಿನಾಂಕ : 19–10–2012ರಂದು ಹೊರಡಿಸಲಾದ ಸರ್ಕಾರಿ ಆದೇಶ ಸಂಖ್ಯೆ : ಆಇ 18 ಎಸ್‌ಆರ್‌ಪಿ 2012ರಲ್ಲಿ ಮನೆ ಬಾಡಿಗೆ ಭತ್ಯೆ ಮಂಜೂರಾತಿ ಕುರಿತಂತೆ ವಿಧಿಸಿರುವ ಇತರೆ ಎಲ್ಲಾ ನಿಬಂಧನೆಗಳು ಮುಂದುವರೆದು ಅನ್ವಯಿಸತಕ್ಕದ್ದು.

5. ಈ ಆದೇಶಗಳು 1ನೇ ಅಕ್ಟೋಬರ್ 2013 ರಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸುಂದರ ರಾಜ ಗುಪ್ತ

ಸರ್ಕಾರದ ಜಂಟಿ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಸೇವೆಗಳು–2).

P.R. 897

SC - 500

ಆರ್ಥಿಕ ಸಚಿವಾಲಯ

ವಿಷಯ : ಜಂಟಿ ಇಲಾಖಾ ವಿಚಾರಣೆ–1) ಶ್ರೀ ಬಿ. ಗಂಗಣ್ಣ, ಜಂಟಿ ನಿಯಂತ್ರಕರು, 2) ಶ್ರೀ ಎಸ್.ವಿ. ಗಿರಿಯಪ್ಪ, ಲೆಕ್ಕಾಧಿಕಾರಿ ರಾಜ್ಯ ಲೆಕ್ಕಪತ್ರ ಇಲಾಖೆ ಅವರುಗಳ ವಿರುದ್ಧ–ಸನ್ಮಾನ್ಯ ಲೋಕಾಯುಕ್ತರಿಗೆ ವಹಿಸುವ ಬಗ್ಗೆ.

ಓದಲಾಗಿದೆ : ಅಪರ ನಿಬಂಧಕರು ವಿಚಾರಣೆಗಳು–2, ಕರ್ನಾಟಕ ಲೋಕಾಯುಕ್ತ ಇವರ ಪತ್ರ ಸಂಖ್ಯೆ : Compt. Lok. BCD.167/2001–02, ದಿನಾಂಕ : 8–7–2013 ಮತ್ತು ಸನ್ಮಾನ್ಯ ಲೋಕಾಯುಕ್ತರ ವರದಿ ದಿನಾಂಕ : 13–06–2013.

ಪ್ರಸ್ತಾವನೆ :

ಅಪರ ನಿಬಂಧಕರು ವಿಚಾರಣೆಗಳು–2, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಅವರು ಮೇಲೆ ಓದಲಾದ ದಿನಾಂಕ : 8–7–2013ರ ಪತ್ರದಲ್ಲಿ ಸನ್ಮಾನ್ಯ ಲೋಕಾಯುಕ್ತರು ದಿನಾಂಕ : 13–6–2013ರ ವರದಿಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಿದ್ದಾರೆ. ಸನ್ಮಾನ್ಯ ಲೋಕಾಯುಕ್ತರು ತಮ್ಮ ವರದಿಯಲ್ಲಿ ರಾಜ್ಯ ಲೆಕ್ಕಪತ್ರ ಇಲಾಖೆಯ ಶ್ರೀ ಬಿ. ಗಂಗಣ್ಣ, ಜಂಟಿ ನಿಯಂತ್ರಕರು ಹಾಗೂ ಶ್ರೀ ಎಸ್.ವಿ. ಗಿರಿಯಪ್ಪ, ಲೆಕ್ಕಾಧಿಕಾರಿ ಅವರುಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮುಖ್ಯ ಲೆಕ್ಕಾಧಿಕಾರಿ ಹಾಗೂ ಲೆಕ್ಕಾಧೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಬೆಂಗಳೂರು ವಿಜಯನಗರ 2ನೇ ಹಂತದ ಆರ್.ಪಿ.ಸಿ. ಲೇಔಟ್‌ನ ನಿವೇಶನ ಸಂಖ್ಯೆ : 22, 23, 24 ಇವುಗಳಲ್ಲಿ ಈಜುಕೊಳ ನಿರ್ಮಾಣ ಕೈಗೊಳ್ಳುವಲ್ಲಿ ನಿವೇಶನಗಳ ಒಡೆತನ ಕುರಿತು ದಾಖಲೆಗಳ ಮೂಲಕ ಖಚಿತಪಡಿಸಿಕೊಳ್ಳದೇ ಹಾಗೂ ನಿರ್ಮಾಣದ ಅಂದಾಜು ವೆಚ್ಚದ ಪರಿಷ್ಕರಣೆಗೆ ಸರ್ಕಾರದ ಅನುಮೋದನೆ ಪಡೆದಿರುವುದನ್ನು ಖಚಿತಪಡಿಸಿಕೊಳ್ಳದೇ ಗುತ್ತಿಗೆದಾರರಿಗೆ ರೂ. 3,46,53,350/–ಗಳನ್ನು ಬಿಡುಗಡೆ ಮಾಡಲು ಅವಕಾಶ ಕಲ್ಪಿಸುವ ಮೂಲಕ ಪಾಲಿಕೆಗೆ ಆರ್ಥಿಕ ನಷ್ಟ ಉಂಟು ಮಾಡಿರುವುದು ತನಿಖೆಯಿಂದ ದೃಢಪಟ್ಟಿದ್ದು ಅವರುಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವಂತೆ ಶಿಫಾರಸ್ಸು ಮಾಡಿದ್ದಾರೆ. ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 256 ರಾಲೆಪ 2013, ಬೆಂಗಳೂರು, ದಿನಾಂಕ : 24–08–2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ರಾಜ್ಯ ಲೆಕ್ಕಪತ್ರ ಇಲಾಖೆಯ ಶ್ರೀ ಬಿ. ಗಂಗಣ್ಣ, ಜಂಟಿ ನಿಯಂತ್ರಕರು ಹಾಗೂ ಶ್ರೀ ಎಸ್.ವಿ. ಗಿರಿಯಪ್ಪ, ಲೆಕ್ಕಾಧಿಕಾರಿ ಇವರುಗಳ ವಿರುದ್ಧ ಮೇಲೆ ಹೇಳಿದ ಆರೋಪಗಳ ಕುರಿತು ಪೂರ್ಣ ಪ್ರಮಾಣದ ಇಲಾಖಾ ವಿಚಾರಣೆಯನ್ನು ಸನ್ಮಾನ್ಯ ಲೋಕಾಯುಕ್ತ ಅವರ ಮೂಲಕ ನಡೆಯಬೇಕೆಂದು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

P.R. 898

ಎನ್. ಲಕ್ಷ್ಮಣ

ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡ).

PERSONNEL AND ADMINISTRATIVE REFORMS SECRETARIAT

NO. DPAR 214 SAS 2013, BANGALORE, DATED 17TH JULY, 2013.

SUB : Revocation of suspension of Sri M.K. Aiyappa, IAS (KN-2002)

READ : Government Order No. DPAR 214 SAS 2013, dated 25-03-2013

Whereas, based on the investigation report submitted by the Additional Director General of Police, Karnataka Lokayukta, Bangalore regarding irregularities in restoring the Khata in respect of 32 acres 04 guntas of government land in favour of Sri Narasimhaiah in Survey No. 62 of Madappanahally Village, Hesaraghatta Hobli, Bangalore North Taluk by Sri M.K. Aiyappa, IAS while he was working as Deputy Commissioner, Bangalore Rural District and further that Sri M.K. Aiyappa, IAS was detained by Lokayukta Police on 13-03-2013 and was in police/judicial custody for more than 48 hours, Sri M.K. Aiyappa, IAS, the then Deputy Commissioner, Bangalore Rural District was placed under suspension r/r 3(2) of AIS (D&A) Rules w.e.f. 13-03-2013 and was continued under suspension until further orders u/r 3(3) of AIS (D&A) Rules, 1969 pending further investigation by Lokayukta Police.

Whereas, Sri M.K. Aiyappa, IAS has filed W.P. Nos. 13779-780/2013 before the Hon'ble High Court of Karnataka with a prayer to quash the order dated : 20-10-2012 passed by the Special Judge for Prevention of Corruption Act in PCR NO. 55/2012 and also to quash the FIR in Cr. No. 81/2012 and the entire proceedings pending before the Special Judge for Prevention of Corruption Act etc.,

Whereas, the Hon'ble High Court by its judgement dated : 21-05-2013 has allowed the above said Writ Petitions and has quashed the order dated : 20-10-2012 passed by the Special Judge for Prevention of Corruption Act as well as the complaint.

Whereas, Sri M.K. Aiyappa, IAS in his representation dated 23-05-2013, has requested to revoke the suspension order and reinstate him to duty in the light of the judgement dated 21-05-2013 of the Hon'ble High Court of Karnataka in the above said Writ Petition.

Whereas, the State Government have examined the request in consultation with Karnataka Lokayukta in terms of instruction contained in circular No. DPAR 42 SeEiVi 2011, dated : 28-09-2011 and the Additional Director General of Police, Karnataka Lokayukta has given consent for revocation of suspension subject to posting him outside the place of incident.

Whereas, the State Government has examined the proposal and the decided to revoke suspension and reinstate Sri M.K. Aiyappa, IAS into service.

Now, therefore, in exercise of the powers conferred by rule 3(7)(c) of the AIS (D&A) Rules, 1969, State Government hereby revokes suspension and reinstate Sri M.K. Aiyappa, IAS (KN : 2002), into service with immediate effect.

By Order and in the name of the Governor of Karnataka,

P.R. 899

U.H. NARAYANASWAMY
Under Secretary to Government,
DP & AR (Services-I).

ತೋಟಗಾರಿಕೆ ಸಚಿವಾಲಯ

ವಿಷಯ : ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತವು ಕೆನರಾ ಬ್ಯಾಂಕಿನಿಂದ ಸಾಲ ಪಡೆಯಲು ಗ್ಯಾರಂಟಿ ಅವಧಿ ವಿಸ್ತರಿಸುವ ಕುರಿತು.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ವಾಕೈ 03 ರೇಉನಿ 2011 (ಭಾಗ-1), ದಿನಾಂಕ : 31-3-2011
2. ಸರ್ಕಾರಿ ಆದೇಶ ಸಂಖ್ಯೆ : ವಾಕೈ 03 ರೇಉವಿ 2011 (ಭಾಗ-1), ದಿನಾಂಕ : 25-04-2012.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಇವರ ಪತ್ರ ಸಂಖ್ಯೆ : ಕರೇಮಾಮ/ಹಣಕಾಸು ವಿಭಾಗ/2012-13/847, ದಿನಾಂಕ : 16-01-2013 ಮತ್ತು ಕರೇಮಾಮ/ಹಣಕಾಸು ವಿಭಾಗ 2012-13/948, ದಿನಾಂಕ : 18-02-2013.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 31-03-2011ರ ಆದೇಶದಲ್ಲಿ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತವು ರೇಷ್ಮೆ ಗೂಡಿನ ಬೆಲೆ ಕುಸಿತವನ್ನು ತಡೆದು ರೇಷ್ಮೆ ನೂಲಿನ ಬೆಲೆಯಲ್ಲಿ ಸ್ಥಿರತೆಯನ್ನು ಉಂಟುಮಾಡಲು ಸಮರ್ಪಕವಾಗಿ ಕಾರ್ಯನಿರ್ವಹಿಸುವುದಕ್ಕಾಗಿ ಅಗತ್ಯವಿರುವ ದುಡಿಯುವ ಬಂಡವಾಳಕ್ಕಾಗಿ ಕೆನರಾ ಬ್ಯಾಂಕ್‌ನಿಂದ ರೂ. 25.00 ಕೋಟಿಗಳ (ಇಪ್ಪತ್ತೈದು ಕೋಟಿ ರೂಪಾಯಿಗಳು ಮಾತ್ರ) ಸಾಲ ಪಡೆಯುವುದಕ್ಕೆ ಸರ್ಕಾರದ ಗ್ಯಾರಂಟಿಯನ್ನು ಕೆಲವು ಷರತ್ತುಗಳೊಂದಿಗೆ ಮಂಜೂರಾತಿ ನೀಡಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ : 25-04-2012ರ ಆದೇಶದಲ್ಲಿ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತವು ಕೆನರಾ ಬ್ಯಾಂಕಿನಿಂದ ರೂ. 25.00 ಕೋಟಿಗಳ ಸಾಲ ಪಡೆಯುವ ಗ್ಯಾರಂಟಿ ಅವಧಿಯನ್ನು ಕೆಲವು ಷರತ್ತುಗೊಳಪಟ್ಟು ದಿನಾಂಕ : 31-3-2013 ರವರೆಗೆ ವಿಸ್ತರಿಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ದಿನಾಂಕ : 16-01-2013 ಮತ್ತು 18-02-2013ರ ಪತ್ರಗಳಲ್ಲಿ ಪ್ರಚಲಿತ ಮಾರುಕಟ್ಟೆ ದರಗಳು ಸ್ವಲ್ಪ ಹೆಚ್ಚು ಇದ್ದರೂ ಸಹ ಮಂಡಳಿಯಲ್ಲಿ ಭದ್ರತೆಯ ಆಧಾರದ ಮೇಲೆ ಸಾಲಮಿತಿ ಪಡೆದಿರುವ ಗ್ರಾಹಕರಿಗೆ ಸಾಲದ ರೂಪದಲ್ಲಿ ರೇಷ್ಮೆ ನೀಡಬೇಕಾಗಿರುತ್ತದೆ. ಇದಲ್ಲದೆ ಮಂಡಳಿಯನ್ನೇ ಅವಲಂಬಿಸಿರುವ ಹುರಿಕಾರರಿಗೂ ಸಹ ನಿರಂತರ ರೇಷ್ಮೆ ಸರಬರಾಜು ಮಾಡುವ ಅವಶ್ಯಕತೆ ಇದೆ ಹಾಗೂ ಈಗಾಗಲೇ ಮುಕ್ತ ಮಾರುಕಟ್ಟೆಯಲ್ಲಿ ಕಚ್ಚಾ ರೇಷ್ಮೆ ಬೆಲೆಯನ್ನು ಇಳಿಸಲು ಖಾಸಗಿ ವರ್ತಕರು ಮುಂದಾಗುತ್ತಿದ್ದಾರೆ. ಖಾಸಗಿ ವರ್ತಕರು ಇನ್ನು ಮುಂದೆ ಆಗಬಹುದಾದ ಬೆಲೆ ಇಳಿಕೆಯನ್ನು ನಿರೀಕ್ಷಿಸಿ ಸಾಕಷ್ಟು ರೇಷ್ಮೆಯನ್ನು ಖರೀಸುತ್ತಿಲ್ಲ. ಇದರಿಂದ ಮಂಡಳಿಯ ಮೇಲೆ ರೇಷ್ಮೆ ಖರೀದಿಸಲು ಒತ್ತಡ ಹೆಚ್ಚಾಗುತ್ತಿದೆ. ಮಂಡಳಿಯು ಖರೀದಿಯಲ್ಲಿ ಪಾಲ್ಗೊಳ್ಳದಿದ್ದರೆ ಖಾಸಗಿ ವರ್ತಕರು ಸಹ ಖರೀದಿಯನ್ನು ಸ್ಥಗಿತಗೊಳಿಸುವುದರಿಂದ ರೇಷ್ಮೆ ವಹಿವಾಟು ಆಗದೇ ನೂಲು ಬಿಚ್ಚಾಣಿಕೆದಾರರು ಆರ್ಥಿಕವಾಗಿ ದುರ್ಬಲವಾಗುವುದರಲ್ಲದೇ, ಬಂಡವಾಳವಿಲ್ಲದೆ ಗೂಡು ಮಾರುಕಟ್ಟೆಗಳಲ್ಲಿ ಗೂಡು ಖರೀದಿಯಲ್ಲಿ ವಿಫಲರಾಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಮಂಡಳಿಯು ಕಾರ್ಯೋನ್ಮುಖವಾಗಿ ಸತತ ರೇಷ್ಮೆ ಖರೀದಿ ಮಾಡಬೇಕಾಗಿರುತ್ತದೆ. ಪ್ರಸ್ತುತ ಮಂಡಳಿಯು ಆರ್ಥಿಕ ಪರಿಸ್ಥಿತಿ ಉತ್ತಮವಿಲ್ಲದ ಕಾರಣ ಬ್ಯಾಂಕಿನಿಂದ ಸಾಲ ಪಡೆದು ರೇಷ್ಮೆ ಖರೀದಿಯನ್ನು ಮುಂದುವರೆಸಬೇಕಾಗಿರುವುದರಿಂದ, ಸರ್ಕಾರ ನೀಡಿರುವ ಗ್ಯಾರಂಟಿ ಅವಧಿಯನ್ನು ದಿನಾಂಕ: 01-04-2013 ರಿಂದ 31-03-2014 ರವರೆಗೆ ವಿಸ್ತರಿಸುವಂತೆ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ತೋಇ 09 ರೇಉನಿ 2013, ಬೆಂಗಳೂರು, ದಿನಾಂಕ : 31-08-2013

ಪ್ರಸ್ತಾವನೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಲಾಗಿದ್ದು. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತಕ್ಕೆ ದಿನಾಂಕ : 31-03-2014ರ ಒಂದು ವರ್ಷದ ಅವಧಿಗೆ ಕೆನರಾ ಬ್ಯಾಂಕಿನಲ್ಲಿ ರೂ. 15.00 ಕೋಟಿಗಳ (ರೂಪಾಯಿ ಹದಿನೈದು ಕೋಟಿಗಳು ಮಾತ್ರ) ಸಾಲವನ್ನು ಪಡೆಯಲು ಮತ್ತು ಸರ್ಕಾರದ ಖಾತ್ರಿಯು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಡಿಸಿ ಸರ್ಕಾರವು ಆದೇಶಿಸಿದೆ.

ಎ) ಕೇಂದ್ರ ಸರ್ಕಾರವು ರೇಷ್ಮೆ ನೂಲಿನ ಆಮದು ಶುಲ್ಕಗಳಲ್ಲಿ ಇಳಿಕೆ ಮಾಡಿರುವ ಹಿನ್ನೆಲೆಯಲ್ಲಿ ಸ್ಥಳೀಯ ರೇಷ್ಮೆ ನೂಲಿನ ಬೆಲೆಗಳಲ್ಲಿ ಸ್ಥಿರತೆ ಉಂಟು ಮಾಡುವ ಉದ್ದೇಶದಿಂದ ಖಾತ್ರಿಯನ್ನು ನೀಡಲಾಗಿರುತ್ತದೆ. ಈ ಸಾಲವನ್ನು ಬೆಲೆ ಸ್ಥಿರೀಕರಣವನ್ನು ಬಿಟ್ಟು ಬೇರೆ ಯಾವುದೇ ಆಂತರಿಕ ಅಗತ್ಯಗಳಿಗೆ ಉಪಯೋಗಿಸಬಾರದು.

ಬಿ) ಸಾಲದ ಖಾತೆಯನ್ನು ಬ್ಯಾಂಕಿನಲ್ಲಿ ಪ್ರತ್ಯೇಕವಾಗಿ ನಿರ್ವಹಿಸುವುದು ಹಾಗೂ ರೇಷ್ಮೆ ನೂಲಿನ ಖರೀದಿ/ಮಾರಾಟ ವಹಿವಾಟುಗಳನ್ನು ಈ ಹೊಸ ಬ್ಯಾಂಕ್ ಖಾತೆಯಿಂದಲೇ ನಿರ್ವಹಿಸತಕ್ಕದ್ದು. ಈ ಖಾತೆಯಲ್ಲಿ ಬೇರೆ ಯಾವುದೇ ವಹಿವಾಟನ್ನು ನಿರ್ವಹಿಸತಕ್ಕದ್ದಲ್ಲ.

ಸಿ) ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ವಹಿವಾಟಿನ ಬಗ್ಗೆ ಸರ್ಕಾರಕ್ಕೆ ತ್ರೈಮಾಸಿಕ ವರದಿ ನೀಡತಕ್ಕದ್ದು ಮತ್ತು ಈ ಹಣವನ್ನು ಬೇರೆ ಯಾವುದೇ ಚಟುವಟಿಕೆಗಳಿಗೆ ಉಪಯೋಗಿಸಿರುವುದಿಲ್ಲವೆಂದು ದೃಢೀಕರಿಸತಕ್ಕದ್ದು.

ಡಿ) ಸರ್ಕಾರಕ್ಕೆ ಶೇ. 1 ರಂತೆ ಗ್ಯಾರಂಟಿ ಕಮೀಷನ್ ಪಾವತಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 223 ವೆಚ್ಚ–4/2013, ದಿನಾಂಕ : 02–07–2013ರಲ್ಲಿಯ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

P.R. 900

ಕೆ. ಉಮಾವತಿ

ಪೀಠಾಧಿಕಾರಿ (ಪ್ರಭಾರ),

ತೋಟಗಾರಿಕೆ ಇಲಾಖೆ (ರೇಷ್ಮೆ).

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ವಾಕೈ 13 ಸಿಐಎಂ 2013, ಬೆಂಗಳೂರು, ದಿನಾಂಕ : 16–08–2013.

ರೈತರ ಸಹಕಾರಿ ನೂಲಿನ ಗಿರಣಿ ನಿ. ಸಂಸ್ಥೆ ರಾಣೆಬೆನ್ನೂರು, ಹಾವೇರಿ ಜಿಲ್ಲೆ ಇವರಿಂದ ಮಾರಾಟ ತೆರಿಗೆ ಮತ್ತು ಖರೀದಿ ತೆರಿಗೆಯ ಬಾಬ್ತು ಅನುಕ್ರಮವಾಗಿ ರೂ. 63.03 ಲಕ್ಷಗಳು ಹಾಗೂ ರೂ. 43.24 ಲಕ್ಷಗಳು ಪಾವತಿಸಲು ಬಾಕಿ ಇದ್ದು, ಇದನ್ನು ಬಡ್ಡಿ ರಹಿತ ಸಾಲಗಳೆಂದು ಪರಿವರ್ತಿಸಲು ಸರ್ಕಾರದ ಆದೇಶ ಸಂಖ್ಯೆ : ಸಿಎಂಡಬ್ಲ್ಯು 14 ಸಿಐಎಂ 2004, ದಿನಾಂಕ : 18–03–2005 ಮತ್ತು ದಿನಾಂಕ : 31–03–2005ಗಳ ಮೇರೆಗೆ ಆದೇಶಗಳನ್ನು ಹೊರಡಿಸಲಾಗಿರುತ್ತದೆ. ಸದರಿ ಆದೇಶಗಳಲ್ಲಿ ಸಾಲದ ಲೆಕ್ಕ ಶೀರ್ಷಿಕೆ "6860–04–190–1–17–394 (ಸಕ್ಕರೆ)" ಎಂದು ಇರುವುದನ್ನು ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳತಕ್ಕದ್ದು.

ಲೆಕ್ಕ ಶೀರ್ಷಿಕೆ "6860–01–190–1–02–394 (ಜವಳಿ)" ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಈ ತಿದ್ದುಪಡಿಯನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಎಫ್‌ಡಿ 73 ಆರ್‌ಎಲ್‌ಜಿ 2012, ದಿನಾಂಕ : 23–07–2013ರ ಮೂಲಕ ನೀಡಿರುವ ಸೂಚನೆಗಳ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

P.R. 901

ಸುಜಾತ ಆರ್. ಪ್ರಸಾದ್

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಹಕಾರಿ ಸಕ್ಕರೆ).

COMMERCE AND INDUSTRIES SECRETARIAT

SUB : Guidelines for claiming reimbursement of Central Sales Tax (CST) by Mega Industries under sanctioned Special Package of Incentives and Concessions-reg.

READ :
1. Proceeding of 110th State Level Co-ordination Committee meeting dated : 21-07-2012.
2. Letter No. ಕೈವಾಇ/ಕೈಅ/ಇ3/ವ.ಉ.ರಿ/2012-13, dated 21-08-2012, 19-01-2013 and 13-03-2013 from Commissioner for Industrial Development and Director of Industries and Commerce, Bangalore.

PREAMBLE :

The draft guidelines for claiming reimbursement of Central Sales Tax (CST) by Mega Industries wherever applicable were discussed in the 110th State Level Co-ordination Committee meeting held on 21-07-2012. After detailed discussion, in the meeting the proposed guidelines were accepted for recommending to Finance Department.

Based upon the recommendations of the 110th State Level Co-ordination Committee meeting dated : 21-07-2012, Commissioner for Industrial Development and Director of Industries and Commerce has requested the Government vide letter read at (2) above to issue guidelines to be followed for claiming reimbursement of Central Sales Tax (CST) by Mega Industries wherever applicable. The draft guidelines were sent to Finance Department for concurrence.

Hence this order.

GOVERNMENT ORDER NO. CI 16 SPI 2013, BANGALORE, DATED : 02-09-2013.

Government is pleased to issue the following guidelines to be followed by Mega Industries for claiming reimbursement of Central Sales Tax (CST) if sanctioned under Special Package of Incentives and Concessions ;

Procedure for claiming the reimbursement of CST

(a) Mega Industries which have been sanctioned the benefit of CST reimbursement as part of special package of incentives and concessions by the Government through separate Govt. order, shall file an application along with the following documents, for the sanction and release of first installment of CST reimbursement.

1.	Application in Annexure-A
2.	Duly filled Annexure-8 on local employment
3.	Copy of the VAT/CST registration certificate
4.	CST paid certificate from ACCT, Local VAT office, Department of Commercial Taxes as in the prescribed format, as per Annexure-B for every six months period. (i.e. from April to September and October to March)
5.	Copy of the First sales invoice
6.	Copy of IEM-Part-II acknowledgement/IL.

(b) Commissioner for Industrial Development and Director of Industries and Commerce will scrutinize the documents and issue a sanction order.

(c) The eligible enterprise shall file claims for half yearly periods i.e. from April to September and October to March. When interstate sale by an enterprise commenes in a period after the month of April or the month of September in a year, the first installment of reimbursement shall be claimed from the date of first sale invoice of interstate sale to either 30th of September or 31st March, as the case may be Thereafter, reimbursement can be claimed for 6 month periods i.e. from April to September and October to March, except the last instalment which again will be part period from either April or September to the date of end of reimbursement period.

(d) The Directorate will scrutinize the proposal and will obtain confirmation from the Commissioner, Department of Commercial Taxes, regarding CST payment by the unit for a particular period and subject to enterprise's eligibility, the Directorate shall make recommendation to the Govt. for release of eligible grants towards the reimbursement CST paid..

(e) On receipt of the funds from the Government, the enterprise shall draw the amount on payee's receipt duly countersigned by Commissioner for Industrial Development and Director of Industries & Commerce.

(f) For the sanction and release of 2nd and subsequent installments, the unit has to submit only the CST paid certificate from ACCT, local VAT office and on receipt of the same in the Directorate, the procedure at (b) & (c) will repeat.

This order is issued vide, FD concurrence No. FD 26 CSL 2013, Dated : 29-07-2013.

By Order and in the name of the Governor of Karnataka,

P.R. 902 **SHIVASHANKAR NAIK. L**

SC-100 Desk Officer (Technical Cell),

Commerce and Industries Department,

COMMERCE AND INDUSTRIES SECRETARIAT

SUB : Tranfer of Shares of Vijayanagar Steel Ltd., held by Officers of Government of Karnataka-reg.

READ : Letter of Managing Director, Vijayanagar Steel Ltd., No. VSL/MD/CI : ToS/2013-14, dated : 20-06-2013.

PREAMBLE :

The Managing Director, Vijayanagar Steel Ltd., vide his letter read above has stated that the following officers of Government of Karnataka are holding one share each with a face value Rs. 1000/- of Vijayanagar Steel Ltd.,

Sl. No.	No. of Shares	Share amount Rs.	Share Holder
01	01	1000	Dr. Rajkumar Khatri, Commissioner for ID and Director Industries and Commerce
02	01	1000	Smt. Vandana Sharma, MD, KSIIDC & Chairman VNSL
03	01	1000	Sri. G.A. Adagatti, MD VNSL and Joint Secretary, C & I Department
04	01	1000	Sri. K.H. Sheshagiri, Under Secretary (ID), C & I Department.
05	01	1000	Sri. M.S. Ganapathy, Deputy Secretary, C & I Department
Total	**05**	**5000**	

Has further stated that the above officers are transferred/retired and it is necessary to have the shares transferred to the officers, presently holding positions in Commerce and Industries Department.

Hence the following Order.

GOVERNMENT ORDER NO. CI 154 SPI 2013, BANGALORE, DATED : 02-09-2013.

The Government is pleased to accord approval to the transfer of the shares of Vijayanagar Steel Ltd., in favour of the following of the Commerce and Industries Department.

Sl. No.	Share Holder	Official presently holding the post
01	Dr. Rajkumar Khatri, IAS, Commissioner for ID and Director Industries and Commerce	Sri. Maheshware Rao, IAS, Commissioner for ID and Director Industries & Commerce
02	Smt. Vandana Sharma, IAS, MD, KSIIDC & Chairman VNSL	Sri. P.B. Ramamurthy, IAS MD, KSIIDC & Chairman VNSL
03	Sri. G.A. Adagatti, MD VNSL and Joint Secretary, C & I Department	Sri. Anil A Uppin, MD, MEI Ltd.
04	Sri. K.H. Sheshagiri, Under Secretary (ID), C & I Department.	Sri. Shivashankar Naik L. Desk Officer (Technical Cell), C & I Department.
05	Sri. M.S. Ganapathy, Deputy Secretary, C & I Department	Sri. M. Shivalingaswamy, Deputy Secretary, C & I Department.

By Order and in the name of the Governor of Karnataka,

P.R. 903

SHIVASHANKAR NAIK. L

Desk Officer (Technical Cell),

Commerce and Industries Department,

COMMERCE AND INDUSTRIES SECRETARIAT

SUB : Approval to M/s Indian Cane Power Limited to enhance the cane crushing capacity from 5000 to 12000 TCD & Co-generation from 28 to 78 MW for their unit at Uttur Village, Mudhol Taluk Bagalkot District-reg.

REF :

1. 5th SHLCC meeting held on 10-10-2005.
2. Government Order No. CI 28 SPI 2006, dated : 28-03-2006.
3. Request from M/s Indian Cane Power Limited dated : 25-05-2013.

PREAMBLE :

In the 5th SHLCC meeting held on 10-10-2005 read at (1) above the Government approved the proposal of M/s Indian Cane Power Limited for establishment of Sugar factory of 2500 TCD capacity at Uttur Village, Mudhol Taluk Bagalkot District. Accordingly Government order read at (2) above was issued. The Company's present crushing capacity is 5000 TCD, as per their statement.

Now M/s Indian Cane Power Limited has submitted a proposal for enhancement of the cane crushing capacity of the said unit from 5000 TCD to 12000 TCD and Co-generation from 28 to 78 MW with an investment of Rs. 323.15 crores with an additional water requirement of 5000 KLPD from Ghataprabha River without any land requirement at the present and incentives and concession as per Industrial policy 2009-14 or any other applicable policy for the expansion activity. M/s Indian Cane Power Limited in their letter dated : 25-05-2013 requested the Hon'ble Chief Minister vide letter (3) above to approve the investment proposal early.

The Government has examined the matter in all aspects and hence the following order.

GOVERNMENT ORDER NO. CI 108 SPI 2013, BANGALORE, DATED : 27-07-2013.

The Government is pleased to accord in principal approval to M/s Indian Cane Power Limited at Uttur Village, Mudhol Taluk Bagalkot District, for enhancement of the crushing capacity from 5000 to 12000 TCD & Co-generation Power from 28 to 78 MW, with an investment of Rs. 323.15 crores, with the following terms and conditions :-

- Water Resource Department to allot 3000 KLPD water from Ghataprabha river subject to availability and technical feasibility. The Industry should resort to maximum reuse of water and minimize the water requirement.
- Industry should obtain clearance from Energy Department for the Power requirement.
- Incentives and concessions as per applicable policy.

GENERAL TERMS AND CONDITIONS :

1. Environment : The promoters to obtain CFE and CFO from KSPCB and environmental clearance from MOEF, GOI.
2. Employment : The Company shall prepare a plan for development of Human Resources required or the project, train local people and provide employment to these trained local youth and comply with the provisions of Industrial Policy of Govt. of

Karnataka (Dr. Sarojini Mahishi Report). A copy of Human Resources Development plan shall be sent to the Commissioner for I.D. & Director of Industries and Commerce for monitoring.

3. Vendor Development : Where ever there is scope for vendor development for the project, the compnay shall prepare a vendor development plan, develop local vendors and procure the required inputs, components and sub assemblies from these local vendor uhits. A copy of the vendor development plan shall be sent to the Commissioner for ID. & Director of Industries and Commerce for monitoring.

4. Social Infrastructure Development : The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.

5. Others :

(a) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.

(b) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

By Order and in the name of the Governor of Karnataka,

P.R. 905

SHIVASHANKAR NAIK. L

Desk Officer (Technical Cell),

Commerce and Industries Department,

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 18 ಭೂದಾಸ 2013 ಬೆಂಗಳೂರು, ದಿನಾಂಕ:30-08-2013

ವಿಷಯ: ನಗರಮಾಪನಕ್ಕೆ ಸಂಬಂಧಪಟ್ಟಂತೆ ಹಾಲಿ ಚಾಲ್ತಿಯಲ್ಲಿರುವ ಯುಪಿಓಆರ್ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗುತ್ತಿರುವ ಪಿ.ಆರ್.ಕಾರ್ಡ್ ದಾಖಲೆಯೊಂದಿಗೆ ಸಾರ್ವಜನಿಕರಿಗೆ ವಿತರಿಸಲು ಸಾರಾಂಶ ಹೊಂದಿರುವ ಪಿ.ಆರ್. ಕಾರ್ಡ್‌ನ್ನು ಸಹ ಸಿದ್ದಪಡಿಸಿ ವಿತರಿಸುವ ಬಗ್ಗೆ.

ರಾಜ್ಯದ ಆಯ್ದ 5 ನಗರಾಸ್ತಿಗಳನ್ನು ಅಳತೆ ಮಾಡಿ ಹಕ್ಕುದಾಖಲೆಗಳನ್ನು ತಯಾರಿಸುವ (ಯು.ಪಿ.ಓ.ಆರ್) ಯೋಜನೆಯು ಜಾರಿಯಲ್ಲಿದ್ದು, ಆಸ್ತಿಧಾರಕರಿಗೆ 6 ರಿಂದ 8 ಪುಟಗಳ ವಿವರವಾದ ಮಾಹಿತಿಯನ್ನು ಒಳಗೊಂಡ ಪಿ.ಆರ್.ಕಾರ್ಡ್‌ನ್ನು ಒದಗಿಸಲು ದಿನಾಂಕ:14-06-2012ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ. ಸದರಿ ಪಿ.ಆರ್. ಕಾರ್ಡ್ ಜೊತೆಗೆ ಕೆಲವು ಅತೀ ಮುಖ್ಯ ಅಂಶಗಳಾದ ಆಸ್ತಿಯ ಸಂಖ್ಯೆ, ಮಾಲೀಕರ ಹೆಸರು, ಆಸ್ತಿಯ ಸ್ವರೂಪ, ವಿಸ್ತೀರ್ಣ, ನಕ್ಷೆ ಮತ್ತು ಅಳತೆಯನ್ನು ಹೊಂದಿರುವ ಪಿ.ಆರ್. ಕಾರ್ಡ್‌ನ್ನು ವಿತರಿಸುವುದು ಸಹ ಸೂಕ್ತವೆಂದು ತೀರ್ಮಾನಿಸಿರುವುದರಿಂದ ನಗರ ಆಸ್ತಿ ಹೊಂದಿರುವ ಸಾರ್ವಜನಿಕರಿಗೆ ಒಂದೇ ಪುಟದಲ್ಲಿ ಸಾರಾಂಶ ಹೊಂದಿರುವ ಕನ್ನಡ ಮತ್ತು ಆಂಗ್ಲ ಭಾಷೆಯ ಪಿ.ಆರ್. ಕಾರ್ಡ್‌ನ್ನು ಒದಗಿಸುವ ಸಲುವಾಗಿ ಪ್ರತ್ಯೇಕ ನಮೂನೆಗಳನ್ನು ಈ ಮೂಲಕ ಪ್ರಕಟಿಸಲಾಗಿದೆ.

ಈ ನಮೂನೆಗಳ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಇವುಗಳು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ 15 ದಿನದೊಳಗೆ ಸರ್ಕಾರದ ಕಾರ್ಯದರ್ಶಿಗಳು (ಭೂಮಿ ಮತ್ತು ಯು.ಪಿ.ಓ.ಆರ್) ಕಂದಾಯ ಇಲಾಖೆ ಇವರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಶಂಭುಲಿಂಗಯ್ಯ,

P.R. 944

SC - 100

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂಮಾಪನ)

ಸಹಕಾರ ಸಚಿವಾಲಯ

ವಿಷಯ: 2012-13ನೇ ಸಾಲಿಗೆ ಇದ್ದಂತೆ ವಿವಿಧ ಯೋಜನೆಗಳಡಿ ಎನ್.ಸಿ.ಡಿ.ಸಿ ಯಿಂದ ಪಡೆದಿರುವ ಸಾಲಗಳ ವಾರ್ಷಿಕ ಕಂತಿನ ಅಸಲು ಮತ್ತು ಬಡ್ಡಿಯನ್ನು ಪಾವತಿಸುವ ಬಗ್ಗೆ.

ಓದಲಾಗಿದೆ: ಸಹಕಾರ ಸಂಘಗಳ ಜಂಟಿ ನಿಬಂಧಕರು ಇವರ ಪತ್ರ ಸಂಖ್ಯೆ:ಆರ್‌ಸಿಎಸ್-ಎಲ್‌ಎನ್‌ಎಸ್ 31/2013-14, ದಿನಾಂಕ:27-07-2013.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರವರು, 2012–13ನೇ ಸಾಲಿನ ಅಂತ್ಯಕ್ಕೆ ಇದ್ದಂತೆ ಎನ್.ಸಿ.ಡಿ.ಸಿ. ವತಿಯಿಂದ ವಿವಿಧ ಯೋಜನೆಗಳಿಗೆ ಪಡೆದಿರುವ ಸಾಲಗಳಿಗೆ ಸಂಬಂಧಿಸಿದಂತೆ ದಿನಾಂಕ:05–10–2013 ರೊಳಗೆ ಎನ್.ಸಿ.ಡಿ.ಸಿ.ಗೆ ಸರ್ಕಾರದಿಂದ ಹಣ ಪಾವತಿಸಿದರೆ ಹಣದ ಮೇಲೆ ಶೇ.0.25 ರಷ್ಟು ರಿಯಾಯತಿ ದೊರಕಲಿದ್ದು, ಒಟ್ಟು ರೂ.2,48,23,373–00 ಗಳನ್ನು ಪಾವತಿಸಬೇಕೆಂದು ಇದಕ್ಕೆ ತಪ್ಪಿದಲ್ಲಿ ವಿಳಂಬವಾಗಿ ಪಾವತಿಸಿದರೆ ರೂ. 2,52,97,289–00ಗಳನ್ನು ಪಾವತಿಸಬೇಕಾಗುತ್ತದೆಂದು ಸಹಾಯಕ ನಿರ್ದೇಶಕರು ಎನ್.ಸಿ.ಡಿ.ಸಿ. ನವದೆಹಲಿ ರವರ ಪತ್ರ ಸಂಖ್ಯೆ: ಎನ್‌ಸಿಡಿಸಿ/ಎ&ಸಿ/10(1) ಆರ್‌ಇಪಿ/2001–02–2545, ದಿನಾಂಕ: 14–06–2013 ರಲ್ಲಿ ತಿಳಿಸಿರುವುದರಿಂದ ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಇ 76 ಸಂಮಾಸ 2013, ಬೆಂಗಳೂರು, ದಿನಾಂಕ:19–09–2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2012–13ನೇ ಸಾಲಿನ ಅಂತ್ಯಕ್ಕೆ ಎನ್.ಸಿ.ಡಿ.ಸಿ ವತಿಯಿಂದ ವಿವಿಧ ಯೋಜನೆಗಳಿಗೆ ಪಡೆದಿರುವ ಸಾಲಗಳ ಬಾಬ್ತು ಅಸಲು ಮತ್ತು ಬಡ್ಡಿ ಮರು ಪಾವತಿ ರೂ.2,48,23,373–00 (ರೂಪಾಯಿ ಎರಡು ಕೋಟಿ ನಲವತ್ತೆಂಟು ಲಕ್ಷದ ಇಪ್ಪತ್ಮೂರು ಸಾವಿರದ ಮೂರು ನೂರಾ ಎಪ್ಪತ್ಮೂರು ಮಾತ್ರ) ಗಳನ್ನು ಅಂದರೆ ಅಸಲು ರೂ. 1,92,28,850–00 (ಒಂದು ಕೋಟಿ ತೊಂಬತ್ತೆರಡು ಲಕ್ಷದ ಇಪ್ಪತ್ತೆಂಟು ಸಾವಿರದ ಎಂಟು ನೂರಾ ಐವತ್ತು ರೂಪಾಯಿಗಳು) ಲೆಕ್ಕ ಶೀರ್ಷಿಕೆ 6003–00–108–0–01–240 (ಯೋಜನೇತರ) (ಪ್ರಭುತ) ರಡಿಯಲ್ಲಿ ಹಾಗೂ ಬಡ್ಡಿ ರೂ.55,94,523–00 (ರೂಪಾಯಿ ಐವತ್ತೈದು ಲಕ್ಷದ ತೊಂಬತ್ನಾಲ್ಕು ಸಾವಿರದ ಐದು ನೂರಾ ಇಪ್ಪತ್ಮೂರು ಮಾತ್ರ) ಗಳನ್ನು ಲೆಕ್ಕ ಶೀರ್ಷಿಕೆ 2049–01–200–2–03–240 (ಯೋಜನೇತರ) (ಪ್ರಭುತ) ರಡಿಯಲ್ಲಿ ಬಿಡುಗಡೆ ಮಾಡಿ ಎನ್.ಸಿ.ಡಿ.ಸಿ. ನವದೆಹಲಿ ಈ ಸಂಸ್ಥೆಗೆ ಪಾವತಿಸಲು ಆದೇಶಿಸಿದೆ.

ಸದರಿ ಮೊಬಲಗನ್ನು ಪಾವತಿಸಲು ಅನುವಾಗಲು ಹಾಗೂ ಖಜಾನೆಯಿಂದ ಡ್ರಾ ಮಾಡಲು ಸಲ್ಲಿಸಬೇಕಾದ ಹಣ ಸಂದಾಯ ರಸೀದಿಯಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು (ಆಡಳಿತ ಮತ್ತು ಅಭಿವೃದ್ಧಿ) ರವರ ಸಹಿ ಮತ್ತು ಸಹಕಾರ ಸಂಘಗಳ ನಿಬಂಧಕರು ರವರು ಮೇಲು ಸಹಿ ಪಡೆದು ಡ್ರಾ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 176–ವೆಚ್ಚ–2–2013 ದಿನಾಂಕ: 05–09–2013 ರಲ್ಲಿ ನೀಡಲಾದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಎಸ್. ನಾಗರಾಜಯ್ಯ,
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

P.R. 945
SC - 50

ಸಹಕಾರ ಸಚಿವಾಲಯ

ವಿಷಯ: ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗದ ಆಯುಕ್ತರ ವೇತನ ನಿಗದಿಪಡಿಸುವ ಬಗ್ಗೆ.

ಓದಲಾಗಿದೆ:
1) ಅಧಿಸೂಚನೆ ಸಂಖ್ಯೆ:ಸಿಇ 20 ಸಿಎಲ್ಎಂ 2013, ದಿನಾಂಕ:18–03–2013.
2) ಅಧಿಸೂಚನೆ ಸಂಖ್ಯೆ:ಸಿಇ 21 ಸಿಎಲ್ಎಂ 2013 ದಿನಾಂಕ:08–04–2013
3) ಕರ್ನಾಟಕ ರಾಜ್ಯ ಸಹಕಾರಿ ಚುನಾವಣಾ ಆಯೋಗದ ಆಯುಕ್ತರ ಪತ್ರ ಸಂಖ್ಯೆ: ಸಚುಆ/38/2013–14, ದಿನಾಂಕ:16–07–2013.

ಪ್ರಸ್ತಾವನೆ:

ಮೇಲೆ ಓದಲಾದ (1)ರ 18–03–2013ರ ಅಧಿಸೂಚನೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಕರ್ನಾಟಕ ಸೌಹಾರ್ದ ಅಧಿನಿಯಮ 1997ಕ್ಕೆ ತಿದ್ದುಪಡಿ ತಂದು ರಾಜ್ಯದಲ್ಲಿರುವ ಸಹಕಾರ ಸಂಘಗಳ ಆಡಳಿತ ಮಂಡಳಿಗಳಿಗೆ ಸಹಕಾರ ಚುನಾವಣಾ ಆಯೋಗದ ಮುಖಾಂತರವೇ ಚುನಾವಣೆಗಳನ್ನು ನಡೆಸಲು ಸಹಕಾರ ಚುನಾವಣಾ ಆಯೋಗವನ್ನು ರಚಿಸಲಾಗಿರುತ್ತದೆ.

ಮೇಲೆ ಓದಲಾದ (2)ರ ದಿನಾಂಕ:08–04–2013ರ ಅಧಿಸೂಚನೆಯಲ್ಲಿ ಶ್ರೀ ಎನ್.ಸಿ. ಮುನಿಯಪ್ಪ ಭಾ.ಆ.ಸೇ.,(ನಿವೃತ್ತ) ಇವರನ್ನು ಐದು ವರ್ಷಗಳ ಅವಧಿಗೆ ಸಹಕಾರ ಚುನಾವಣಾ ಆಯುಕ್ತರನ್ನಾಗಿ ನೇಮಿಸಲಾಗಿದೆ.

ಮೇಲೆ ಓದಲಾದ (3)ರ ದಿ:16–07–2013ರ ಪತ್ರದಲ್ಲಿ ಸಹಕಾರ ಚುನಾವಣಾ ಆಯುಕ್ತರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಗೆ ನಿಯಮಾವಳಿಗಳನ್ನು ರೂಪಿಸದೇ ಇದ್ದ ಕಾರಣ ಸಂಬಳ ಮತ್ತು ಇತರೆ ಭತ್ಯೆಗಳ ಬಗ್ಗೆ ಆದೇಶವಾಗಿರುವುದಿಲ್ಲ, ದಿನಾಂಕ:10–07–2013ರಂದು ಅಂತಿಮವಾಗಿ

ನಿಯಮಾವಳಿಗಳನ್ನು ರೂಪಿಸಿ, ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013ರ ನಿಯಮ 13B 3(b), 13 B 3(c) ಪ್ರಕಾರ ಸಂಬಳ / ಇತರೆ ಸೌಲಭ್ಯಗಳ ಬಗ್ಗೆ ಷರತ್ತು ಮತ್ತು ನಿಬಂಧನೆಗಳನ್ನು ನಿಗಧಿಪಡಿಸಿ ಆದೇಶಗಳನ್ನು ಹೊರಡಿಸಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಒ 20 ಸಿಎಲ್ಎಂ 2013, ಬೆಂಗಳೂರು, ದಿನಾಂಕ:20-09-2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ರಾಜ್ಯದಲ್ಲಿರುವ ಸಹಕಾರ ಸಂಘಗಳ ಹಾಗೂ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಗಳಿಗೆ ಮತ್ತು ಪದಾಧಿಕಾರಿಗಳಿಗೆ ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗದ ಮುಖಾಂತರವೇ ಚುನಾವಣೆಗಳನ್ನು ನಡೆಸಲು ಶ್ರೀ ಎನ್.ಸಿ.ಮುನಿಯಪ್ಪ ಭಾ.ಆ.ಸೇ., (ನಿವೃತ್ತ) ಇವರನ್ನು ಐದು ವರ್ಷಗಳ ಅವಧಿಗೆ ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯುಕ್ತರನ್ನಾಗಿ ನೇಮಿಸಲಾಗಿರುತ್ತದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಗೆ ನಿಯಮಾವಳಿಗಳನ್ನು ರೂಪಿಸಲಾಗಿದ್ದು, ಅದರಂತೆ ಆಯುಕ್ತರು ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013ರ ನಿಯಮ 13B 3(b), 13B 3(c) ರಂತೆ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ದೊರೆಯುವ ಸಂಬಳಕ್ಕೆ ಸಮಾನವಾದ ವೇತನವನ್ನು (ಒಟ್ಟು ಸಂಬಳದಲ್ಲಿ ನಿವೃತ್ತಿ ವೇತನವನ್ನು ಕಳೆದು) ಆಯುಕ್ತರು ಪಡೆಯಲು ಅರ್ಹರಿದ್ದು, ಪ್ರಯಾಣ ಭತ್ಯೆ, ಮನೆ ಬಾಡಿಗೆ ಭತ್ಯೆ, ಕನ್‌ವೇಯೆನ್ಸ್ ಅಲೋಯೆನ್ಸ್, ಆತಿಥ್ಯ ಭತ್ಯೆ, ವೈದ್ಯಕೀಯ ಸೌಲಭ್ಯ, ರಜೆ ಸೌಲಭ್ಯ ಮತ್ತು ಸೇವೆಯ ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದಂತೆ Chapter-IV of the High Court Judges (Salaries and conditions of service) Act 1954 ಹಾಗೂ ನಿಯಮಾವಳಿಗಳಂತೆ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ ಎಂದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಎಸ್. ನಾಗರಾಜಯ್ಯ,
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ

P.R. 946

ನಗರಾಭಿವೃದ್ಧಿ ಸಚಿವಾಲಯ

ವಿಷಯ: ಚಿಕ್ಕಬಳ್ಳಾಪುರ ಜಕ್ಕಲಮಡಗು ಜಲಾಶಯದಿಂದ ಚಿಕ್ಕಬಳ್ಳಾಪುರ ಮತ್ತು ಮಾರ್ಗ ಮಧ್ಯದ ಹಳ್ಳಿಗಳಿಗೆ ಹಾಗೂ ದೊಡ್ಡಬಳ್ಳಾಪುರ ನಗರಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಬಗ್ಗೆ.

ಓದಲಾಗಿದೆ:

1) ಸರ್ಕಾರದ ಆದೇಶ ಸಂಖ್ಯೆ:ನಅಇ 55 ಯುಡಬ್ಲ್ಯೂಎಸ್ 2006 ದಿನಾಂಕ: 05-05-2007.

2) ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು ರವರ ಪತ್ರ ಸಂಖ್ಯೆ:ಕಜಮಂ:ತಾಂತ್ರಿಕ/ಉಮುಅ(ಸ)/ ತಾಅಸ-8/ಸಅ-9/ಜಕ್ಕಲಮಡಗು-ಕುನಿಸಯೋ/214/2013-14, ದಿನಾಂಕ: 22-04-2013.

3) ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಇವರ ಪತ್ರ ಸಂಖ್ಯೆ:ಜಿನಕೋ/ಚಿಸಿ/30/ಸಿ.ಆರ್/157/2012-13 ದಿನಾಂಕ:17-6-2013.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಜಕ್ಕಲಮಡಗು ಜಲಾಶಯ ಅಭಿವೃದ್ಧಿಪಡಿಸಿದಾಗ ಸಂಗ್ರಹವಾಗುವ 4390 ದಶ ಲಕ್ಷ ಲೀಟರ್ ನೀರಿನಲ್ಲಿ 3000 ದಶಲಕ್ಷ ಲೀಟರ್ ನೀರನ್ನು ಚಿಕ್ಕಬಳ್ಳಾಪುರ ನಗರ ಮತ್ತು ಮಾರ್ಗ ಮಧ್ಯದಲ್ಲಿ ಬರುವ ಹಳ್ಳಿಗಳ ಕುಡಿಯುವ ನೀರಿಗಾಗಿ ಮೀಸಲಿಡುವುದು ಹಾಗೂ ಹೆಚ್ಚುವರಿ ನೀರನ್ನು ದೊಡ್ಡಬಳ್ಳಾಪುರಕ್ಕೆ ಒದಗಿಸುವುದು ಹಾಗೂ, ಜಕ್ಕಲಮಡಗು ಜಲಾಶಯದಿಂದ ದೊಡ್ಡಬಳ್ಳಾಪುರ ನಗರಕ್ಕೆ ಕುಡಿಯುವ ನೀರು ಸರಬರಾಜು ಆಗುವುದರಿಂದ ದೊಡ್ಡಬಳ್ಳಾಪುರ ತಾಲ್ಲೂಕಿನ ಹತ್ತಿರ ಜಕ್ಕಲಮಡಗು ಜಲಾಶಯಕ್ಕೆ ಹರಿದು ಬರುವ ನೀರಿಗೆ ಅಡ್ಡಲಾಗಿ ಮುಂದೆ ಯಾವುದೇ ಕಾಲದಲ್ಲಿಯೂ ಜಲಾಶಯ/ಕೆರೆಯನ್ನು ಕಟ್ಟಬಾರದೆಂದು ಆದೇಶಿಸಲಾಗಿದೆ. ಮುಂದುವರೆದು, ಚಿಕ್ಕಬಳ್ಳಾಪುರ ಜಕ್ಕಲಮಡಗು ಜಲಾಶಯದ ಉಸ್ತುವಾರಿ ನೀರಿನ ಹಂಚಿಕೆ ಇವುಗಳನ್ನು ನಿರ್ವಹಿಸಲು ಕೋಲಾರ (ಪ್ರಸ್ತುತ ಚಿಕ್ಕಬಳ್ಳಾಪುರ) ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮನ್ವಯ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಜಕ್ಕಲಮಡುಗು ಜಲಾಶಯದ ಉಸ್ತುವಾರಿ ನೀರಿನ ಹಂಚಿಕೆಯನ್ನು ನಿರ್ವಹಿಸಲು ರಚನೆಗೊಂಡಿರುವ ಸಮನ್ವಯ ಸಮಿತಿಯ ಸಭೆಯನ್ನು ದಿನಾಂಕ: 09-01-2013ರಂದು ಮತ್ತು 08-06-2013ರಂದು ನಡೆಸಲಾಗಿ ಜಕ್ಕಲಮಡಗು ಜಲಾಶಯದಲ್ಲಿ ಶೇಖರಣೆಯಾಗುವ 4930 ದಶ ಲಕ್ಷ ಲೀಟರ್ ನೀರಿನಲ್ಲಿ 3000 ದಶಲಕ್ಷ ಲೀಟರ್ (68.33%) ಚಿಕ್ಕಬಳ್ಳಾಪುರ ನಗರ ಹಾಗೂ ಮಾರ್ಗ ಮಧ್ಯದ ಚಿಕ್ಕಬಳ್ಳಾಪುರ ಹಳ್ಳಿಗಳಿಗೆ ಮತ್ತು 1390 ದಶ ಲಕ್ಷ ಲೀಟರ್ (31.67%) ನೀರನ್ನು ದೊಡ್ಡಬಳ್ಳಾಪುರ ನಗರಕ್ಕೆ ಹಂಚಿಕೆ ಮಾಡುವುದು ಸೂಕ್ತವೆಂದು ಸಮನ್ವಯ

ಸಮಿತಿಯ ಸದಸ್ಯರು ತೀರ್ಮಾನಿಸಿರುವ ಬಗ್ಗೆ ತಿಳಿಸಿರುತ್ತಾರೆ. ಅಲ್ಲದೆ, ಜಲಾಶಯದ ನಿರ್ಮಾಣದ ವೆಚ್ಚವೂ ಸಹ ಸದರಿ ಅನುಪಾತದಲ್ಲಿ ಭರಿಸಿರುವುದಾಗಿ ತಿಳಿಸಿದ್ದಾರೆ.

ಮೇಲೆ ಓದಲಾದ (3)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ಇವರು ತಾಂತ್ರಿಕ ಮಾಹಿತಿಯನ್ನು ಪರಿಶೀಲಿಸಿ ಸಮನ್ವಯ ಸಮಿತಿಯಲ್ಲಿ ತೀರ್ಮಾನಿಸಿದಂತೆ ಜಕ್ಕಲಮಡಗು ಜಲಾಶಯದಲ್ಲಿ ಸದಾಕಾಲ 4390 ದಶಲಕ್ಷ ಲೀಟರ್ ನೀರು ಸಂಗ್ರಹವಾಗುವುದು ಕಷ್ಟಸಾಧ್ಯವಾಗಿರುವುದರಿಂದ, ಜಕ್ಕಲಮಡಗು ಜಲಾಶಯ ಅಭಿವೃದ್ಧಿಪಡಿಸಿದಾಗ ಸಂಗ್ರಹವಾಗುವ ನೀರಿನಲ್ಲಿ ಶೇ.68.34ರಷ್ಟು ನೀರನ್ನು ಚಿಕ್ಕಬಳ್ಳಾಪುರ ಮತ್ತು ಮಾರ್ಗ ಮಧ್ಯದಲ್ಲಿ ಬರುವ ಹಳ್ಳಿಗಳ ಕುಡಿಯುವ ನೀರಿಗಾಗಿ ಹಾಗೂ ಶೇ.31.66ರಷ್ಟು ನೀರನ್ನು ದೊಡ್ಡಬಳ್ಳಾಪುರ ನಗರಕ್ಕೆ ಒಂದೇ ಸಮಯದಲ್ಲಿ ಒದಗಿಸುವಂತೆ ಮರು ಹಂಚಿಕೆ ಮಾಡಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಾಂಭರಿಸಲಾಗಿ, ದೊಡ್ಡಬಳ್ಳಾಪುರ ನಗರವೂ ಸಹ ಬೆಂಗಳೂರು ನಗರಕ್ಕೆ ಸಮೀಪದಲ್ಲಿದ್ದು, ಬಹಳ ವೇಗವಾಗಿ ಚಿಕ್ಕಬಳ್ಳಾಪುರ ನಗರದಂತೆಯೇ ಬೆಳೆಯುತ್ತಿದ್ದು, ಎರಡೂ ನಗರಗಳ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 20 ಯುಡಬ್ಲ್ಯೂಎಸ್ 2013 ಬೆಂಗಳೂರು, ದಿನಾಂಕ:13–08–2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಚಿಕ್ಕಬಳ್ಳಾಪುರದ ಜಕ್ಕಲಮಡಗು ಜಲಾಶಯ ಅಭಿವೃದ್ಧಿಪಡಿಸಿದಾಗ ಸಂಗ್ರಹವಾಗುವ ನೀರಿನಲ್ಲಿ ಶೇ.68.33ರಷ್ಟು ನೀರನ್ನು ಚಿಕ್ಕಬಳ್ಳಾಪುರ ಮತ್ತು ಮಾರ್ಗ ಮಧ್ಯದಲ್ಲಿ ಬರುವ ಹಳ್ಳಿಗಳ ಕುಡಿಯುವ ನೀರಿಗಾಗಿ ಹಾಗೂ ಶೇ.31.67ರಷ್ಟು ನೀರನ್ನು ದೊಡ್ಡಬಳ್ಳಾಪುರ ನಗರಕ್ಕೆ Pro-rata ಮಾದರಿಯಲ್ಲಿ ಒಂದೇ ಸಮಯದಲ್ಲಿ ಒದಗಿಸಲು ಈ ಕೆಳಕಂಡ ನಿಬಂಧನೆಗೊಳಪಟ್ಟು, ಸರ್ಕಾರದ ಅನುಮೋದನೆ ನೀಡಿದೆ.

ನಿಬಂಧನೆಗಳು:

1. ಜಕ್ಕಲಮಡಗು ಜಲಾಶಯದ ನೀರಿನ ಪ್ರಮಾಣ ತಿಳಿಯಲು ಅಳತೆ ಮಾಪನವನ್ನು (Gauge) ಅಳವಡಿಸಲು ಕ್ರಮ ಕೈಗೊಳ್ಳುವುದು.
2. ಪ್ರಸ್ತುತ ಚಿಕ್ಕಬಳ್ಳಾಪುರ ಮತ್ತು ದೊಡ್ಡಬಳ್ಳಾಪುರ ನಗರಗಳಿಗೆ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ನೀರು ಹರಿವಿನ ಮಾಪನ ಸಾಧನಗಳನ್ನು ಎರಡೂ ಕಡೆಯಲ್ಲಿ ಅಳವಡಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳುವುದು.
3. ನಿರ್ವಹಣೆ ಸಂದರ್ಭದಲ್ಲಿ ಆಗಬಹುದಾದ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ನೀರಿನ ಸರಬರಾಜಿಗೆ ತೊಂದರೆಯಾಗದಂತೆ ಮತ್ತೊಂದು ಫ್ಲೋ ಮೀಟರನ್ನು ಸ್ಟಾಂಡ್–ಬೈ ಆಗಿ ಕಾಯ್ದಿರಿಸಿ ನೀರನ್ನು ಒದಗಿಸಲು ಅಳವಡಿಸಿದ ಫ್ಲೋ ಮೀಟರ್‌ನಲ್ಲಿ ತೊಂದರೆ ಉಂಟಾದಲ್ಲಿ ಸ್ಟಾಂಡ್ ಬೈ ಮೀಟರನ್ನು ತಕ್ಷಣ ಅಳವಡಿಸತಕ್ಕದ್ದು.
4. ಎರಡೂ ನಗರಗಳಿಗೆ ನೀರು ಪಂಪು ಮಾಡುವ ವಿವರಣೆಗಳನ್ನು ಜ್ಯಾಕ್‌ವೆಲ್‌ಗಳಲ್ಲಿ ಲಾಗ್ ಬುಕ್ ರಿಜಿಸ್ಟರನ್ನು ಪ್ರಾರಂಭಿಸಿ, ಪ್ರತಿ ದಿನ ಪಂಪ್ ಮಾಡುವ ಅವಧಿಯನ್ನು ತಪ್ಪದೇ ದಾಖಲಿಸತಕ್ಕದ್ದು. ಇದಕ್ಕೆ ಎರಡೂ ಕಡೆಯ ಸಿಬ್ಬಂದಿಯನ್ನು ಹಾಗೂ ಒಬ್ಬ ತಟಸ್ಥ ವ್ಯಕ್ತಿಯನ್ನು ಪಂಪ್ ಮಾಡುವ ಅವಧಿಯನ್ನು ನೋಡಿಕೊಳ್ಳಲು ಸ್ಥಳೀಯ ಸಂಸ್ಥೆಯು ನೇಮಿಸುವುದು.
5. ಸಂಬಂಧಿತ ಅಂಕಿ ಅಂಶಗಳನ್ನು ಪ್ರತಿ ದಿನ ನಗರಸಭೆಗಳ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.
6. ನೀರಿನ ಹಂಚಿಕೆಯಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳತಕ್ಕದ್ದು.
7. ನೀರಿನ ಭವಣೆ ಹೆಚ್ಚಾಗಿರುವುದರಿಂದ ಯಾವುದೇ ರೀತಿಯಲ್ಲಿ ನೀರು ಪೋಲಾಗದಂತೆ ಅಥವಾ ಕೊಳವೆಗಳಲ್ಲಿ ಸೋರಿಕೆಯಾಗದಂತೆ ಎಚ್ಚರಿಕೆ ವಹಿಸತಕ್ಕದ್ದು ಹಾಗೂ ಉತ್ತಮ ಗುಣಮಟ್ಟದ ನೀರನ್ನು ಒದಗಿಸಲು ಕ್ರಮ ಕೈಗೊಳ್ಳತಕ್ಕದ್ದು.
8. ಮುಂದೆ ಯಾವುದೇ ವಿವಾದಗಳು ಉಂಟಾದಾಗ ಸಮನ್ವಯ ಸಮಿತಿ ಸಭೆ ನಡೆಸಿ, ಪರಿಹಾರಗಳನ್ನು ಕಂಡುಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎಂ. ವಾಸುದೇವರಾವ್,

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

P.R. 947

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ–2, ಬೆಂಗಳೂರು–59